# ಸಿಎನ್ನಾರ್ ವಿರಚಿತ ಸಾಹಿತ್ಯ ವಿಮರ್ಶೆ–ಸಿದ್ಧಪಾಠ/ಕಿರುಟಿಪ್ಪಣಿ

**ಅಂತಿಮ ಬಿಎ, ಐಚ್ಛಿಕ ಕನ್ನಡ ಆರನೆಯ ಸೆಮಿಸ್ಟರ್, ಪತ್ರಿಕೆ 8 ರ 50 ಅಂಕಗಳಿಗೆ ಇಟ್ಟಿರುವ ಪಠ್ಯ**

(ಸಂಗ್ರಹಿಸಿ, ಟೈಪಿಸಿ, ಹೀಗೆ ನಿ–ರೂಪಸಿದವರು: ಡಾ. ಎಚ್ ಎನ್ ಮಂಜುರಾಜ್, ಕನ್ನಡ ಸಹಪ್ರಾಧ್ಯಾಪಕ, ಮಹಿಳಾ ಸರ್ಕಾರಿ ಕಾಲೇಜು, ಕೆ ಆರ್ ನಗರ)

ಸಾಹಿತ್ಯ ಅಥವಾ ಕಾವ್ಯ ಮೀಮಾಂಸೆಯು ಭಾರತದಲ್ಲಿ ಬೆಳೆಯಿತು. ಪ್ರಾರಂಭದಲ್ಲಿ ಸಾಹಿತ್ಯ ವಿಮರ್ಶೆಯು ಮೀಮಾಂಸೆಯ ಜೊತೆಗೊತೆಗೆ ಬೆಳೆಯಲಿಲ್ಲ. ಆದರೆ ಈ ಬಗೆಗೆ ಕವಿಗಳು ಮತ್ತು ಲಾಕ್ಷಣಿಕರು ಚಿಂತಿಸುತ್ತಲೇ ಇದ್ದರು. ಇಷ್ಟಕ್ಕೂ ಮೀಮಾಂಸೆ ಮತ್ತು ವಿಮರ್ಶೆಗಳು ಒಂದಕ್ಕೊಂದು ಪೂರಕ ಮಾತ್ರವಲ್ಲ ದಾರಿತೋರುಗ. ಕಾವ್ಯವೆಂದರೇನು? ಎಂಬ ಮೀಮಾಂಸೆಯ ಪ್ರಶ್ನೆಯು ಯಾವುದು ಕಾವ್ಯ? ಇಂಬ ತಾತ್ತ್ವಿಕವೂ ಪ್ರಯೋಗಿಕವೂ ಆದ ಮೂಲಭೂತತೆಗೆ ಹಾದಿ ಮಾಡಿಕೊಡುತ್ತದೆ. ಅ–ಕಾವ್ಯವನ್ನು ಗುರುತಿಸಲಾದರೂ ಒಂದು ಪ್ರಮೇಯದ ಅಗತ್ಯವಿದೆ. ಹಾಗೆ ನೋಡಿದರೆ ಲಲಿತಕಲೆಗಳೆಲ್ಲ ಇಂಥ ಪ್ರಶ್ನೆಯನ್ನು ಎದುರಿಸಿಯೇ ಉತ್ತರ ಕಂಡುಕೊಳ್ಳುವಂಥ ಪ್ರಯತ್ನ ಪಡಬೇಕು.

ಮೀಮಾಂಸೆ ಮತ್ತು ವಿಮರ್ಶೆಯ ನಡುವೆ ಪರಸ್ಪರ ಕೊಡು–ಕೊಳುವ ಸಂಬಂಧವಿದೆ. ಸಾಹಿತ್ಯವೆಂದರೇನು? ಎಂಬ ಮೀಮಾಂಸೆಯ ಪ್ರಶ್ನೆಯು ಯಾವುದು ಸಾಹಿತ್ಯ? ಎಂಬ ವಿಮರ್ಶೆಯ ಪ್ರಶ್ನೆಯೊಂದಿಗೆ ತಳುಕು ಹಾಕಿಕೊಂಡಿದೆ. ಹೀಗಿರುವುದರಿಂದಲೇ ಇವೆರಡು ಪರಿಕಲ್ಪನೆಗಳು ಭಾರತೀಯ ಮತ್ತು ಪಾಶ್ಚಿಮಾತ್ಯ– ಎರಡೂ ದೇಶಗಳ ಕವಿಗಳನ್ನು ಕಾಡಿದವು. ಭಾರತೀಯ ಕಾವ್ಯ ಮೀಮಾಂಸೆಯು ಭರತನಿಂದ ಪ್ರಾರಂಭವಾದರೆ ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯು ಅರಿಸ್ಟಾಟಲನಿಂದ ಅಧಿಕೃತವಾಗಿ ಆರಂಭವಾಯಿತು. ನಮ್ಮಲ್ಲಿ **'ಕಾವ್ಯಾಲಾಪಾಂಶ್ಚವರ್ಜಯೇತ್'** ಅಂದರೆ ಕಾವ್ಯಾಲಾಪವನ್ನು ಕೈ ಬಿಡಬೇಕು ಎಂದಂತೆ ಅಲ್ಲಿಯೂ ಅರಿಸ್ಟಾಟಲನ ಗುರು ಪ್ಲೇಟೊ ತನ್ನ ಆದರ್ಶರಾಜ್ಯದಲ್ಲಿ ಕವಿಗಳಿಗೆ ಸ್ಥಾನವಿಲ್ಲ ಎಂದು ಘೋಷಿಸಿದ್ದನು.

ಭರತಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ರುದ್ರನಾಟಕಕ್ಕೆ ಸಂಬಂಧಪಟ್ಟಂತೆ ಆಡಿದ ನುಡಿಗಳನ್ನು ಮುಂದೆ ಬಂದ ವಿದ್ವಾಂಸರು ಒಟ್ಟಾರೆ ಸಾಹಿತ್ಯಕ್ಕೆ ಅನ್ವಯಿಸಿ, ವ್ಯಾಖ್ಯಾನಿಸಿದರು. ಅದರಂತೆ ಅಲ್ಲಿಯೂ ಅರಿಸ್ಟಾಟಲನು ಎತ್ತಿದ ರುದ್ರನಾಟಕದ ಚರ್ಚೆಗೆ ಹಲವು ಆಯಾಮಗಳು ಕ್ರೋಡೀಕೃತಗೊಂಡವು. ಹೀಗೆ ಎರಡೂ ದೇಶಗಳ ಮೀಮಾಸಾಕ್ಷೇತ್ರವು ಪ್ರಾರಂಭದಲ್ಲೇ ದಿಗ್ಗಜರ ಧೀರನುಡಿಗಳಿಂದ ಚರ್ಚಾವೇದಿಕೆಯೊಂದನ್ನು ನಿರ್ಮಿಸಿಕೊಟ್ಟಿತು. ಮುಂದೆ ಬಂದ ಆಲಂಕಾರಿಕರು/ಕಾವ್ಯಮೀಮಾಂಸಕರು ತಂತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತ ರ್ಚೆಯನ್ನು ಬೆಳೆಸಿದರು.

1. **ವಿಮರ್ಶೆ 1.1 ವಿಮರ್ಶೆ ಎಂದರೇನು? 1.2 ವಿಮರ್ಶೆಯ ಸ್ವರೂಪ ಮತ್ತು ಕಾರ್ಯಗಳು 1.3 ವಿಮರ್ಶಾತ್ಮಕ ವಾದಗಳ ಸ್ವರೂಪ**
2. **ವಿಮರ್ಶೆಯ ಪ್ರಮುಖ ಪರಿಕಲ್ಪನೆಗಳು 2.1 ಅನುಕರಣವಾದ 2.2 ಕಥಾರ್ಸಿಸ್ (2.2.1 ಮನೋವೈಜ್ಞಾನಿಕ ವ್ಯಾಖ್ಯಾನ 2.2.2 ನೈತಿಕ ವ್ಯಾಖ್ಯಾನ 2.2.3 ಮಾನವೀಯ ವ್ಯಾಖ್ಯಾನ) 2.3 ಹೊರೆಸನ ಔಚಿತ್ಯ ಪರಿಕಲ್ಪನೆ 2.4 ಕೊಲರಿಜ್ ಮತ್ತು ಪ್ರತಿಭೆ 2.5 ಭಾರತೀಯ ಕಾವ್ಯ ಮೀಮಾಂಸೆ: ತೌಲನಿಕ ಟಿಪ್ಪಣಿಗಳು 2.6 ಮಾದರಿ ಬದಲಾವಣೆ**
3. **ಆಧುನಿಕ ವಿಮರ್ಶಾ ಪ್ರಸ್ಥಾನಗಳು 3.1 ಕರ್ತೃಕೇಂದ್ರಿತ ವಿಮರ್ಶೆ 3.1.1 ಕರ್ತೃನಿಷ್ಠ ವಿಮರ್ಶೆ 3.1.2 ಮನೋವೈಜ್ಞಾನಿಕ ವಿಮರ್ಶೆ 3.2 ಸಮಾಜಕೇಂದ್ರಿತ ವಿಮರ್ಶೆ 3.2.1 ಚಾರಿತ್ರಿಕ ವಿಮರ್ಶೆ 3.2.2 ಮಾರ್ಕ್ಸ್‌ವಾದಿ ವಿಮರ್ಶೆ 3.2.3 ಸ್ತ್ರೀನಿಷ್ಠ ವಿಮರ್ಶೆ 4. ಪ್ರಾಯೋಗಿಕ ವಿಮರ್ಶೆ**

– – – – – – – – –

1. **ವಿಮರ್ಶೆ** ಎಂಬುದು ವಿಮರ್ಶಾ ಎಂಬ ಸಂಸ್ಕೃತ ಪದದಿಂದ ಬಂದದ್ದು. ವಿ+ಮೃಶ್. ಮೃಶ್ ಎಂಬುದಕ್ಕೆ ತೀಡುವುದು, ಉಜ್ಜುವುದು, ಪರೀಕ್ಷಿಸುವುದು ಎಂದರ್ಥಗಳಿವೆ. ವಿ ಎಂಬುದು ಉಪಸರ್ಗ. ವಿಶೇಷವಾದ ಪರೀಕ್ಷೆಯೇ ವಿಮರ್ಶಾ. ಇಂಗ್ಲಿಷಿನ ಕ್ರಿಟಿಕ್ ಶಬ್ದವು ಗ್ರೀಕ್‌ಭಾಷೆಯ ಕ್ರಿಟಿಕೋಸ್ (kritikos) ಎಂಬುದರಿಂದ ಬಂದಿದೆ. ಹಾಗೆಂದರೆ ತೀರ್ಪು, ಮೌಲ್ಯಮಾಪನ, ಗುಣದೋಷ ವಿವೇಚನೆ ಎಂದರ್ಥ. ಸಾಹಿತ್ಯವಿಮರ್ಶೆ ಎಂಬುದು ನಿರ್ದಿಷ್ಟ ಅರ್ಥದಲ್ಲಿ ಬಳಕೆಯಾಗುವ ಪದ. ಅದು ಸಾಹಿತ್ಯ ಅಥವಾ ಕಾವ್ಯವನ್ನು ಕುರಿತಾದ ಯಾವುದೇ ಕಾರ್ಯಕ್ಕೆ ಬಳಸಬಹುದಾದಂಥದು. ಕೃತಿಯ ಸಂಪಾದನೆ (editing) ಕೃತಿಯನ್ನು ಕುರಿತ ಭಾಷ್ಯ ಅಥವಾ ಟಿಪ್ಪಣಿ (commentary) ಅರ್ಥವಿವರಣೆ (Interpretation) ಮೌಲ್ಯಮಾಪನ (evaluation) ಏನೇ ಆಗಿರಲಿ, ಸಾಹಿತ್ಯ ವಿಮರ್ಶೆಯ ವ್ಯಾಪ್ತಿಯಲ್ಲಿ ಬರುತ್ತವೆ.

1.2 ಪಾಶ್ಚಿಮಾತ್ಯರಲ್ಲಿ ಕ್ರಮವಾಗಿ ಪ್ಲೇಟೊ, ಅರಿಸ್ಟಾಟಲ್, ಹೊರೆಸ್, ಲಾಂಜೈನಸ್, ಎಡ್ವರ್ಡ್‌ಬುಲ್ಲೊ, ಎ.ಸಿ. ಬ್ರಾಡ್ಲೆ, ಕೊಲರಿಜ್, ವರ್ಡ್ಸ್‌ವರ್ತ್, ಎಲಿಯಟ್ ಮುಂತಾದವರು ಕಾವ್ಯಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆಯನ್ನು ಕುರಿತು ಮಾತಾಡಿದರು ಹಾಗೂ ಬೆಳೆಸಿದರು.

ಡಿಡೆರೊ, ಆ್ಯಡಿಸನ್, ಸ್ಯಾಮುಯೆಲ್ ಜಾನ್ಸನ್ ಮುಂತಾದವರಿಗೆ ಕೃತಿಪರೀಕ್ಷೆಯೇ ವಿಮರ್ಶಾ ಮಾನದಂಡವಾಗಿತ್ತು. ಈಗಂತೂ ಸಾಹಿತ್ಯವಿಮರ್ಶೆಯು ಅಭೂತಪೂರ್ವವಾಗಿ ಬೆಳೆದಿದೆ. ಆಧುನಿಕ ಜ್ಞಾನಶಿಸ್ತುಗಳು ತೀಕ್ಷ್ಣವಾಗಿ, ಸೂಕ್ಷ್ಮವಾಗಿ ಬೆಳೆದಂತೆಲ್ಲ ಸಾಹಿತ್ಯವಿಮರ್ಶೆಯ ವ್ಯಾಪ್ತಿಯೂ ಹಿಗ್ಗುತ್ತಿದೆ; ಆನ್ವಯಿಕತೆ ಹೆಚ್ಚಾಗುತ್ತಿದೆ. ಸಾಹಿತ್ಯವಿಮರ್ಶೆಯಲ್ಲಿ ಮೌಲ್ಯಮಾಪನವು ಗೌಣವಾಗುತ್ತ, ಕೃತಿಸಂಪಾದನೆ–ವ್ಯಾಖ್ಯಾನ–ವಿಶ್ಲೇಷಣೆಗಳಿಗೆ ಆಧುನಿಕರು ಹೆಚ್ಚಿನ ಗಮನ ಕೊಡುತ್ತಿದ್ದಾರೆಂದು ನೇರವಾಗಿ ಸಿಎನ್ಆರ್ ಆಪಾದನೆ ಮಾಡುತ್ತಾರೆ. ನವ್ಯವಿಮರ್ಶೆ, ರಾಚನಿಕವಿಮರ್ಶೆ ಮತ್ತು ಮನೋವೈಜ್ಞಾನಿಕ ವಿಮರ್ಶೆಗಳಲ್ಲಿ ತೀರ್ಮಾನ ಮತ್ತು ಮೌಲ್ಯಮಾಪನ ಇಲ್ಲವೇ ಇಲ್ಲ ಎನ್ನುತ್ತಾರೆ.

ಭಾರತೀಯ ಸಂದರ್ಭದಲ್ಲಿ ನಮಗೆ ಕಾಣುವುದು ಕಾವ್ಯಮೀಮಾಂಸೆಯೇ ಹೊರತು ಸಾಹಿತ್ಯವಿಮರ್ಶೆಯಲ್ಲ! ಭರತನಿಂದ ಹಿಡಿದು ಹದಿನೈದನೇ ಶತಮಾನದ ವಿಶ್ವನಾಥನವರೆಗೆ ಅಂದರೆ ಒಂದು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲ ಲಾಕ್ಷಣಿಕರು ಮತ್ತು ಸಾಹಿತ್ಯಚಿಂತಕರು ನಮಗೆ ಕಾಣುತ್ತಾರೆ ವಿನಾ ಸಾಹಿತ್ಯವಿಮರ್ಶಕರಲ್ಲ ಎನ್ನುವ ಸಿಎನ್ಆರ್ ಅವರು ನಮ್ಮ ಲಾಕ್ಷಣಿಕರಿಗೆ ಒಂದು ಕೃತಿಯ ಸಮಗ್ರತೆಯ ಪರಿಕಲ್ಪನೆಯೇ ಇರಲಿಲ್ಲ. ಖಂಡನೆಗೆ ಮತ್ತು ಮಂಡನೆಗೆ ಕೃತಿಯ ಕೆಲವು ಶ್ಲೋಕಗಳನ್ನು ಉದಾಹರಿಸುತ್ತಾರೆ ವಿನಾ ಸಾಹಿತ್ಯಕೃತಿಯ 'ಸಾವಯವ ಪರಿಕಲ್ಪನೆ' ಇವರಿಗಿರಲಿಲ್ಲ ಎನ್ನುತ್ತಾರೆ. ಸಾಹಿತ್ಯ ವಿಮರ್ಶಕರು ವಿಮರ್ಶೆಗೆ ಕೃತಿಯನ್ನು ಆಯ್ಕೆ ಮಾಡಿಕೊಂಡಾಗಲೇ ಒಂದು ಬಗೆಯ ಮೌಲ್ಯಮಾಪನ ನಡೆದಿರುತ್ತದೆ. ವಿಮರ್ಶಕನ ಗುರಿ ಕೃತಿಯಲ್ಲಿ ತನ್ನ ಗಮನ ಸೆಳೆಯುವ ವಿಶಿಷ್ಟ ಗುಣವನ್ನು ಸಾಧ್ಯವಾದಷ್ಟೂ ಸೂಕ್ಷ್ಮವಾಗಿ ಮೊದಲು ಗ್ರಹಿಸುವುದು ಎಂದು ಲೀವಿಸ್ ಹೇಳುತ್ತಾನೆ.

**ಸಾಹಿತ್ಯ ವಿಮರ್ಶಕರ ಮುಖ್ಯ ಕರ್ತವ್ಯಗಳೆಂದರೆ:** ಸಾಹಿತ್ಯಕೃತಿಗಳ ಅಧ್ಯಯನ, ವಿವರಣೆ, ವ್ಯಾಖ್ಯಾನ ಮತ್ತು ಮೌಲ್ಯಮಾಪನ. ಇದರ ಜೊತೆಗೆ ಕೆಲವರು ಸೇರಿಸುವ ಇನ್ನೊಂದು: ವಿಮರ್ಶಕನ ಸಾಮಾಜಿಕ ಹೊಣೆಗಾರಿಕೆ. ಮ್ಯಾಥ್ಯೂ ಆರ್ನಾಲ್ಡ್ ದೃಷ್ಟಿಯಲ್ಲಿ ವಿಮರ್ಶಕ ಗಂಭೀರ ಸಾಮಾಜಿಕ ಜವಾಬ್ದಾರಿಯನ್ನು ಹೊತ್ತಿರುವ ಮತ್ತು ಉತ್ತಮ ಮೌಲ್ಯಗಳ ಹಾಗೂ ಸಂಸ್ಕೃತಿಯ ರಕ್ಷಕ. ಈತನು ಸಂಸ್ಕೃತಿ ಎಂಬುದಕ್ಕೆ ಸಾಹಿತ್ಯಕ–ಧಾರ್ಮಿಕ–ವೈಜ್ಞಾನಿಕ ವಿಚಾರ/ಮೌಲ್ಯಗಳ ಒಟ್ಟು ಮೊತ್ತ ಎಂಬ ವಿವರಣೆ ಕೊಡುವನು. ಆದರೆ ಅನೇಕರು ಆರ್ನಾಲ್ಡ್‌ನನ್ನು ಈತನೊಬ್ಬ ಸಂಸ್ಕೃತಿ ಪ್ರಚಾರಕ, ಕೀರ್ತನಕಾರ ಎಂದು ಟೀಕಿಸಿದ್ದಾರೆ. ಶ್ರೇಷ್ಠ ಸಾಹಿತ್ಯ ವಿಮರ್ಶೆ ಕೊನೆಯಲ್ಲಿ ಮಾನವ ಮೌಲ್ಯಗಳ ವಿಮರ್ಶೆಯೇ ಆಗುತ್ತದೆ ಎನ್ನುತ್ತಾರೆ ಸಿಎನ್ಆರ್. ಐ ಎ ರಿಚರ್ಡ್ಸ್ ಮುಂದುವರೆದು, ನನ್ನ ದೃಷ್ಟಿಯಲ್ಲಿ ವಿಮರ್ಶೆಯೆಂದರೆ ಅನುಭವಗಳ ಮಧ್ಯೆ ಸೂಕ್ಷ್ಮ ಭೇದಗಳನ್ನು ಗುರುತಿಸಿ ಅವುಗಳ ಬೆಲೆಗಟ್ಟುವ ಒಂದು ಪ್ರಯತ್ನ. ಟಿ ಎಸ್ ಎಲಿಯಟ್ ದೃಷ್ಟಿಯಲ್ಲಿ ವಿಮರ್ಶೆಯ ಕರ್ತವ್ಯಗಳೆಂದರೆ ಎರಡು: ಕಲಾಕೃತಿಗಳನ್ನು ಅರ್ಥೈಸುವುದು ಮತ್ತು ಅಭಿರುಚಿಯನ್ನು ತಿದ್ದುವುದು. ಪ್ರತಿಯೊಂದು ಕೃತಿಯನ್ನು ಪರೀಕ್ಷಿಸುವಾಗಲೂ ಲೀವಿಸ್ ಮೊದಲಿಗೆ ಎತ್ತುವ ಪ್ರಶ್ನೆ ಎಂದರೆ, ಈ ಕೃತಿಯು ಸಾಹಿತ್ಯಕವಾಗಿ ಅಭಿವ್ಯಕ್ತಿಸುವ ಮೌಲ್ಯಗಳು ಬದುಕಿನ ಪರವಾಗಿಯೇ ಅಥವಾ ಬದುಕನ್ನು ವಿರೋಧಿಸುತ್ತವೆಯೇ ಎಂಬುದು. ಒಟ್ಟಿನಲ್ಲಿ ಉತ್ತಮ ಸಾಹಿತ್ಯ ವಿಮರ್ಶೆಯು ಉತ್ತಮ ಸಾಂಸ್ಕೃತಿಕ ಸಾಮಾಜಿಕ–ನೈತಿಕ ವಿಮರ್ಶೆಯೂ ಆಗಿರುತ್ತದೆ.

**1.3 ವಿಮರ್ಶಾತ್ಮಕ ವಾದಗಳ ಸ್ವರೂಪ:** ವಿಮರ್ಶೆ ಎಂಬುದು 'ಸತ್ಯವಾದ ನಿರ್ಣಯಗಳಿಗಾಗಿ ನಡೆಸುವ ಸಾಮೂಹಿಕ ಶೋಧ' ಹಾಗಾಗಿ ವಿಮರ್ಶಾತ್ಮಕ ವಾದಗಳು ಜಟಿಲ ಮತ್ತು ಸಂಕೀರ್ಣ. ಆದರೆ ವಿಮರ್ಶಕನು ಪೂರ್ವಗ್ರಹ, ವೈಯಕ್ತಿಕ ವಿಕ್ಷಿಪ್ತತೆ, ಅಸೂಯೆ, ಅಜ್ಞಾನಗಳನ್ನು ದಾಟಿರಬೇಕು. ಉದಾಹರಣೆಗೆ, ಗೋಪಾಲಕೃಷ್ಣ ಅಡಿಗರ 'ಭೂಮಿಗೀತ' ಪದ್ಯದ ಎರಡು ಸಾಲು:

**ಮಲೆಘಟ್ಟ ಸೋಪಾನ ಕೆಳಪಟ್ಟಿಯಲ್ಲಿ**
**ಉರುಳು–ಮೂರೇ ಉರುಳು– ಕಡಲ ಕುದಿತದ ಎಣ್ಣೆ ಕೊಪ್ಪರಿಗೆಗೆ–**

ಇಲ್ಲಿ ಒಬ್ಬ ವಿಮರ್ಶಕರಿಗೆ ಕುದಿತದ ಎಣ್ಣೆ ಕೊಪ್ಪರಿಗೆಯು ಸಮುದ್ರದ ರೌದ್ರವನ್ನು ನೆನಪಿಸುವ ಪ್ರತಿಮೆಯಾಗಬಹುದು. ಮತ್ತೊಬ್ಬ ವಿಮರ್ಶಕರಿಗೆ ಇದು ಹಿಂಸೆಯ ಪ್ರತಿಮೆಯಾಗಬಹುದು. ಏಕೆಂದರೆಕವಿತೆಯಲ್ಲಿ ಮುಂದೆ ಬರುವ ಹಕ್ಕಿಕೊರಳನು ಹಿಚುಕಿ, ಸಸಿ ಕೊರಳಕೊಯ್ದು ಎಂಬ ಪದಮುಂಜಗಳು ಇದನ್ನು ಸಮರ್ಥಿಸುತ್ತವೆಂದು ವಾದಿಸಬಹುದು. ಹಾಗೆಯೇ ಕೆಎಸ್‌ನ ಅವರು ಬರೆದದ್ದು ಪ್ರೇಮಗೀತೆಗಳಲ್ಲ, ದಾಂಪತ್ಯಗೀತೆಗಳು ಎಂದು ಕೆಲವರು ಅಭಿಪ್ರಾಯಿಸುವರು.

## 2. ವಿಮರ್ಶೆಯ ಪ್ರಮುಖ ಪರಿಕಲ್ಪನೆಗಳು

**2.1 ಅನುಕರಣವಾದ:** ಪ್ಲೇಟೊ ಮತ್ತು ಅರಿಸ್ಟಾಟಲ್ ಇಬ್ಬರೂ ಬಳಸಿದ ಒಂದು ಮೌಲಿಕ ಪರಿಕಲ್ಪನೆ 'ಇಮಿಟೇಷನ್' ಎಂಬುದು ಗ್ರೀಕ್ ಭಾಷೆಯ 'ಮಿಮೆಸಿಸ್' ಶಬ್ದಕ್ಕೆ ಸಂವಾದಿಯಾಗಿ ಬಳಸಲ್ಪಟ್ಟಿದೆ. ದಾರ್ಶನಿಕನೂ ತತ್ತ್ವಜ್ಞಾನಿಯೂ ಆಗಿದ್ದ ಪ್ಲೇಟೊ ಅನುಕರಣ ಶಬ್ದವನ್ನು ಅದರ

ಸಂಕುಚಿತಾರ್ಥದಲ್ಲಿ ಅಂದರೆ ಪ್ರತಿರೂಪ, ನಕಲು ಎಂದು ಅರ್ಥೈಸಿ, ತನ್ನ ಆದರ್ಶರಾಜ್ಯ 'ಯುಟೋಪಿಯ'ದಿಂದ ಹೊರಗಿಡಲು ಬಳಸಿದನು. ಈ ವಿಚಾರ ಅವನ 'ರಿಪಬ್ಲಿಕ್' ಕೃತಿಯಲ್ಲಿ ಬಂದಿದೆ. ಇದಕ್ಕೆ ಅವನು 'ಮಂಚತತ್ತ್ವ'ವನ್ನು ಬಳಸಿಕೊಳ್ಳುತ್ತಾನೆ. ಚಿತ್ರಕಲಾವಿದರು ಬರೆದ ಮಂಚಚಿತ್ರವು ಬಡಗಿ ಮಾಡಿದ ಅನುಕರಣೆಯ ಅನುಕರಣೆ. ಹಾಗಾಗಿ ಇದು ಸತ್ಯವಲ್ಲ! ಕೇವಲ ನಕಲು ಹಾಗೆಯೇ ಸಾಹಿತಿ/ಕವಿಗಳು ಸಮಾಜವನ್ನು ಅನುಕರಿಸುತ್ತಾರೆ. ಕಲೆ ಎಂಬುದು ನಮ್ಮಲ್ಲಿರುವ ಹೀನ ವಾಸನೆಗಳಿಗೆ (ಕ್ಷುದ್ರತೆಗೆ) ಪುಷ್ಟಿ ಕೊಡುತ್ತದೆ; ಅರಿಷಡ್ವರ್ಗಗಳನ್ನು ಪ್ರಚೋದಿಸುತ್ತದೆ. ಜೊತೆಗೆ ಜನಸಾಮಾನ್ಯರು ಗೌರವ ತೋರುವ ದೇವ–ದೇವತೆಗಳನ್ನು ಕಲಾವಿದರಾದವರು ಸಾಮಾನ್ಯರ ಮಟ್ಟಕ್ಕೆ ಇಳಿಸಿ ಚಿತ್ರಿಸುತ್ತಾರೆ. ಇದರಿಂದ ತಾತ್ತ್ವಿಕ ಮತ್ತು ನೈತಿಕ ನೆಲೆಗಟ್ಟು ಕುಸಿಯುವುದು. ಪ್ಲೇಟೋನ ಈ ವಾದವನ್ನು ಅರಿಸ್ಟಾಟಲ್ ಒಪ್ಪುವುದಿಲ್ಲ. ಅರಿಸ್ಟಾಟಲನು 'ಅನುಕರಣೆ' ಎಂಬುದನ್ನು ಸಕಾರಾತ್ಮಕವಾಗಿ ಬಳಸುತ್ತಾನೆ. ಅನುಕರಣೆಯು ಸಮಾಜದ ಅನುಕರಣೆಯಲ್ಲ; ಮಾನವಜೀವಿಗಳ ಕಾರ್ಯದ ಅನುಕರಣ ಎಂದು ತಿದ್ದುವನು. ಕಾವ್ಯವು ಮಾನವರನ್ನು ಅವರಿರುವುದಕ್ಕಿಂತ ಉತ್ತಮವಾಗಿ, ಅವರಿರುವುದಕ್ಕಿಂತ ಕೀಳಾಗಿ ಅಥವಾ ಅವರಿರುವಂತೆಯೇ ಅನುಕರಿಸಬಹುದು.

ಅರಿಸ್ಟಾಟಲನು ತನ್ನ ಪೊಯಟಿಕ್ಸ್ ಗ್ರಂಥದಲ್ಲಿ ರುದ್ರನಾಟಕದ ಚರ್ಚೆ ನಡೆಸಿರುವನು: Tragedy is an imitation of an action, that is serious, complete and certain magnitude, in the form of an action; not of narrative, through pity and fear. (ರುದ್ರನಾಟಕವು ಸ್ವಯಂಪೂರ್ಣವಾದ, ಗಂಭೀರವಾದ ಕಾರ್ಯವೊಂದರ ಅನುಕರಣ. ಇದು ಭಯ ಮತ್ತು ಕರುಣರಸಗಳನ್ನು ಪ್ರಚೋದಿಸುವಂತಿದ್ದು, ಕ್ರಿಯೆಯ ರೂಪದಲ್ಲಿರುತ್ತದೆ; ವಿವರಣರೂಪದಲ್ಲಿರುವುದಿಲ್ಲ.) ಅಂದರೆ ರುದ್ರನಾಟಕದ ಚರ್ಚೆಯಲ್ಲಿ ಈತ ಅನುಕರಣಕ್ಕೆ ಹೆಚ್ಚಿನ ಮಾನ್ಯತೆ ನೀಡುತ್ತಾನೆ. ಈ ಸಂಗತಿಯನ್ನು ಅರ್ಥ ಮಾಡಿಸಲು 'ಮಿಮೆಸಿಸ್' ಶಬ್ದವನ್ನು ಬಳಸುತ್ತಾನೆ. ಇದು ಮೂಲತಃ ಗ್ರೀಕ್ ಶಬ್ದ. ಇದರರ್ಥ ಮೂಲತತ್ತ್ವ ಎಂದು. ಇದನ್ನು 'ಎಂಟಲಕಿ' ಎಂಬ ಪರಿಕಲ್ಪನೆಯಿಂದ ಅರ್ಥ ಮಾಡಿಸುವನು. ಎಂಟಲಕಿ ಎಂದರೆ ಒಂದು ಜೀವಿಯ ಬೆಳವಣಿಗೆಯ ಸಂಪೂರ್ಣ ಸಾಧ್ಯತೆ. ಮರಿಕುದುರೆ ಬೆಳೆದು ಪ್ರಬುದ್ಧ ಕುದುರೆಯಾಗುವ ಸಾಧ್ಯತೆ– ಮುಂದೆ ಬೆಳೆಯುವ ಎಲ್ಲ ಲಕ್ಷಣಗಳೂ ಸಂಕ್ಷಿಪ್ತರೂಪದಲ್ಲಿ ಈಗಾಗಲೇ ಮರಿಕುದುರೆಯಲ್ಲಿರುತ್ತದೆ. ಯಾವುದೇ ಹೊಸ ಅಂಗ ಬೆಳೆಯುವುದಿಲ್ಲ; ಇರುವ ಅಂಗಭಾಗಗಳೇ ಬೆಳೆಯುವುದು ಮತ್ತು ದೃಢವಾಗುವುದು. ಇದನ್ನು ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕುಂತಕನು ಕೊಡುವ 'ಮಯೂರಾಂಡರಸನ್ಯಾಯ'ಕ್ಕೆ ಹೋಲಿಸಬಹುದು: ನವಿಲಿನ ಮೊಟ್ಟೆಯೊಳಗೆ ಅದು ಮುಂದೆ ಬೆಳೆದು ನವಿಲಗರಿಗಳನ್ನು ಹೊಂದುವ ಸಾಧ್ಯತೆಗಳು ಈಗಾಗಲೇ ಅಡಕವಾಗಿರುತ್ತವೆಯೋ ಹಾಗೆ! ಇದರಿಂದ ತಿಳಿಯುವುದೇನೆಂದರೆ ಅರಿಸ್ಟಾಟಲನು ಸಾಹಿತ್ಯಕೃತಿಗಳನ್ನು 'ಜೀವಂತಿಕೆಯ ಆಗರ' ಎಂದು ಪರಿಗಣಿಸಿರುವುದು. ಹೀಗಾಗಿ ಈತನನ್ನು ಪ್ರಥಮ ರಾಚನಿಕ ವಿಮರ್ಶಕ ಎಂದು ಸಿಎನ್‌ಆರ್ ಗುರುತಿಸುತ್ತಾರೆ. ಒಟ್ಟಿನಲ್ಲಿ ಅನುಕರಣ ಎಂದರೆ ಸೃಜನಶೀಲತೆ, ಸೃಷ್ಟಿಶೀಲಗುಣ, ಸಾಹಿತ್ಯದ ಅನನ್ಯತೆ ಎಂದೆಲ್ಲ ಅರಿಸ್ಟಾಟಲನು ಅರ್ಥ ಹಚ್ಚಿ, ವಿಸ್ತರಿಸಿದನು. ಆ ಮೂಲಕ ಪ್ಲೇಟೋನ ವಾದವನ್ನು ಅಲ್ಲಗಳೆದನು. ಇದರಿಂದ ವಿಮರ್ಶಕರು ಸಾಹಿತ್ಯವು ಇತಿಹಾಸಕ್ಕಿಂತಲೂ ಹೆಚ್ಚು ಶಕ್ತಿಶಾಲಿ' ಎಂದು ಗುರುತಿಸಿದರು.

**2.2 ಕಥಾರ್ಸಿಸ್ (ಶೋಧನ ತತ್ತ್ವ)**: ಇದಕ್ಕೆ ಎನ್ ಬಾಲಸುಬ್ರಹ್ಮಣ್ಯ ಎಂಬ ವಿದ್ವಾಂಸರು 'ಶೋಧನೆ' ಎಂದು ಕರೆದದ್ದನ್ನು ಮೊದಲಿಗೆ ಸಿಎನ್‌ಆರ್ ಅವರು ಆಶ್ಚರ್ಯದಿಂದ ಗಮನಿಸಿದರೂ ಅದರ ಅರ್ಥ ಆಳವಾದಂತೆಲ್ಲ ಅತ್ಯಂತ ಸಮರ್ಪಕ ಸಂವಾದಿ ಎಂದು ತಿಳಿಯುತ್ತಾರೆ. ಅನುಕರಣವಾದದಂತೆ ಕಥಾರ್ಸಿಸ್ ಕೂಡ ಇಂದಿಗೂ ಚರ್ಚಾಸ್ಪದ ಎನ್ನುತ್ತಾರೆ. ಕಥಾರ್ಸಿಸ್ ಎಂಬ ಪದವು ವೈದ್ಯಕೀಯಶಾಸ್ತ್ರದ ಪದ. ಇದರಲ್ಲಿ ವಿರೇಚಕವನ್ನು ಬಳಸುತ್ತಾರೆ. ಇದೊಂದು ಔಷಧ. ಪಚನವಾಗದ ಆಹಾರ ಪದಾರ್ಥಗಳು ಈ ಔಷಧದ ಮೂಲಕ ಹೊರಗೆ ಹಾಕಲ್ಪಡುವಂತೆ ರುದ್ರನಾಟಕಗಳು ನಮ್ಮ ಮನಸ್ಸಿನ ಭಾವನೆಗಳನ್ನು ಶುದ್ಧೀಕರಿಸುವುದು. ಹಾಗಾಗಿ ಇದು ನಮ್ಮ ಮಾನಸಿಕ ಆರೋಗ್ಯಕ್ಕೆ ಸಾಧನ. ಹೀಗಾಗಿ ಕಥಾರ್ಸಿಸ್ ಎಂಬುದಕ್ಕೆ ಶೋಧನೆ, ಭಾವಶುದ್ಧಿ ಎಂದು ಕರೆಯುವರು. ಕಥಾರ್ಸಿಸ್ ಪರಿಕಲ್ಪನೆಯನ್ನು ಕುರಿತಂತೆ ಮುಂದೆ ಬಂದ ವಿಮರ್ಶಕರು ಮೂರು ರೀತಿಯ ವ್ಯಾಖ್ಯಾನಗಳನ್ನು ಕೊಟ್ಟರು:

**2.2.1 ಮನೋವೈಜ್ಞಾನಿಕ ವ್ಯಾಖ್ಯಾನ**: ಇದರ ಪ್ರತಿಪಾದಕರು ಹಂಫ್ರಿಹೌಸ್ ಮತ್ತು ಐ ಎ ರಿಚರ್ಡ್ಸ್. ನಾಟಕಗಳನ್ನು ನೋಡುವಾಗ ಇದ್ದ ತೀವ್ರ ಭಾವಗಳು ಮುಗಿದ ಮೇಲೆ ಶಾಂತಗೊಳ್ಳುವುವು ಎಂದಿವರು ವಾದಿಸುತ್ತಾರೆ.

**2.2.2 ನೈತಿಕ ವ್ಯಾಖ್ಯಾನ**: ಇದರ ಪ್ರತಿಪಾದಕರು ಸ್ಯಾಮ್ಯುಯೆಲ್ ಜಾನ್ಸನ್ ಮತಮ್ಮು ಎ ಸಿ ಬ್ರಾಡ್ಲೆ. ರುದ್ರನಾಟಕಗಳು ಜನರಲ್ಲಿ ಭಯ ಮೂಡಿಸಿ ನೀತಿಯನ್ನು ಪ್ರತಿಷ್ಠಾಪಿಸುವುದರಲ್ಲಿ ಕಾರ್ಯ ನಿರ್ವಹಿಸುವುದು ಎಂದಿವರ ವಾದ.

**2.2.3 ಮಾನವೀಯ ವ್ಯಾಖ್ಯಾನ**: ಇದರ ವಕ್ತಾರರು ಶ್ಲೀಗಲ್ ಮತ್ತು ಶೆಲಿ. ಇದನ್ನು ರಮ್ಯ ಸಂಪ್ರದಾಯದ ವ್ಯಾಖ್ಯೆ ಎಂದೂ ಕರೆಯುವರು. ಇವರ ದೃಷ್ಟಿಯಲ್ಲಿ ರುದ್ರನಾಟಕಗಳು ಮಾನವನ ಘನತೆಯ ನಿದರ್ಶನ. ಇದರ ನಾಯಕರು ಅಪರಿಮಿತ ದುಃಖವನ್ನು ಅನುಭವಿಸುತ್ತಾರಾದರೂ ದುಷ್ಟಶಕ್ತಿಗಳಿಗೆ ಶರಣಾಗದೆ ತಮ್ಮ ಘನತೆಯನ್ನು ಕಾಪಾಡಿಕೊಳ್ಳುತ್ತಾರೆ. ಆದರೆ ಸಿಎನ್ಆರ್ ಅವರು ಇವನ್ನು ವಿವರಿಸಿದ ಮೇಲೆ ಕಥಾರ್ಸಿಸ್ ಪರಿಕಲ್ಪನೆಗೂ ಈ ಮೂರರು ವ್ಯಾಖ್ಯಾನಗಳಿಗೂ ಸಂಬಂಧ ಉಂಟಾಗದೆ, ವ್ಯಾಖ್ಯೆಗಳು ದೂರವೇ ಉಳಿದಿವೆ ಎನ್ನುತ್ತಾರೆ. ಎಲ್ಲ ವ್ಯಾಖ್ಯೆಗಳಲ್ಲೂ ಸತ್ಯಾಂಶವಿದೆ ಎಂದು ಕೊನೆಗೆ ತಿಪ್ಪೆ ಸಾರಿಸುತ್ತಾರೆ.

**2.3 ಹೊರೆಸನ ಔಚಿತ್ಯ ಪರಿಕಲ್ಪನೆ** (Decorum) ಹೊರೆಸನ ಪೂರ್ತ ಹೆಸರು ಕ್ವಿಂತುಸ್ ಹೊರಾಷಿಯಸ್ ಫ್ಲಕ್ಕುಸ್. ಇವನು ಕ್ರಿ ಪೂ ಒಂದನೇ ಶತಮಾನದಲ್ಲಿದ್ದ ಕಾವ್ಯಮೀಮಾಂಸಕ. ಈತ ಲ್ಯಾಟಿನ್ ಭಾಷೆಯಲ್ಲಿ ರಚಿಸಿದ ಕೃತಿಯ ಹೆಸರು Ars Poetica ಇಂಗ್ಲಿಷಿನಲ್ಲಿ Art of Poetry (ಕಾವ್ಯಕಲೆ) ಎಂದು ಅನುವಾದಿಸಲಾಗಿದೆ. ತನ್ನ ಸಮಕಾಲೀನ ಕವಿಗಳಿಗೆ ಈತನು 'ಹೋಮರನ ಕೃತಿಗಳನ್ನು ಅಭ್ಯಸಿಸಿ; ಹಗಲಲ್ಲಿ ಅಭ್ಯಾಸ ಮಾಡಿ ಮತ್ತು ಇರುಳೆಲ್ಲ ಅವನ್ನು ಕುರಿತು ಚಿಂತಿಸಿ' ಎಂದು ಉಪದೇಶ ಮಾಡಿದನು. ಈತ ಮಹಾಕವಿ ವರ್ಜಿಲ್‌ನ ಸಮಕಾಲೀನ. ಕಾವ್ಯವು ಕೇವಲ ಪ್ರಾಚೀನ ಎಂದ ಕಾರಣಕ್ಕೇ ಶ್ರೇಷ್ಠವಾಗುವುದಿಲ್ಲ ಎನ್ನುವ ಈತನು ಶೈಲಿ ಮತ್ತು ಔಚಿತ್ಯ ಪರಿಕಲ್ಪನೆಗೆ ಹೆಚ್ಚಿನ ಒತ್ತು ನೀಡಿದನು. ಈತ ತನ್ನ ಗ್ರಂಥದ ಪ್ರಾರಂಭದಲ್ಲಿ ಅರ್ಧ ಹೆಂಗಸು ಮತ್ತು ಅರ್ಧ ಮೀನಿನ ಚಿತ್ರದ ನಿದರ್ಶನ (ಮತ್ಸ್ಯಕನ್ಯೆ) ಕೊಟ್ಟು, ಕಾವ್ಯವು ಹೀಗೆ ಇರಬಾರದು ಎನ್ನುತ್ತಾನೆ. ಭೀಕರ, ಹಿಂಸಾತ್ಮಕ ಮತ್ತು ಜುಗುಪ್ಸೆಯಿಂದ ಕೂಡಿದ ಕಾರ್ಯಗಳನ್ನು ರಂಗದ ಮೇಲೆ ತೋರಿಸದೆ ಅವನ್ನು ಕೇವಲ ನಿರೂಪಿಸಬೇಕು ಎಂದು ಈತ ಹೇಳುವುದರ ಔಚಿತ್ಯವನ್ನು ನಾವು ಈಗಲೂ ಮನಗಾಣಬಹುದು.

**2.4 ಲಾಂಜೈನಸ್ ಮತ್ತು ಭವ್ಯತೆಯ ಪರಿಕಲ್ಪನೆ** (Sublime) ಈತನ ಕೃತಿಯ ಹೆಸರು On the Sublime. ಇದು ಮೂಲತಃ ಭಾಷಣ–ಲೇಖನಶಾಸ್ತ್ರಕ್ಕೆ ಸಂಬಂಧಪಟ್ಟ ಕೃತಿ. ಇದರ ಮೂಲ ಗ್ರೀಕ್ ಹೆಸರು: ಪೆರಿಹಿಪ್ಸೋಸ್ (Peri Hypsos) ಅಪೂರ್ಣವಾಗಿರುವ ಈ ಕೃತಿಯಲ್ಲಿ ಒಟ್ಟು 44 ಅಧ್ಯಾಯಗಳಿವೆ. ಭವ್ಯತೆಯ ವ್ಯಾಖ್ಯಾನ ಹಾಗೂ ಭವ್ಯತೆಗೆ ಕುಂದು ತರುವ ದೋಷಗಳ ಚರ್ಚೆಯಿದೆ. ಒಟ್ಟು ಐದು ಮೂಲವಿಚಾರಗಳನ್ನು ತನ್ನ ಕೃತಿಯಲ್ಲಿ ಚರ್ಚಿಸುತ್ತಾನೆ: ಅ) ಉನ್ನತ ವಿಚಾರಗಳು ಆ) ತೀವ್ರ ಭಾವನೆಗಳು ಇ) ಅರ್ಥಾಲಂಕಾರ ಮತ್ತು ಶಬ್ದಾಲಂಕಾರಗಳು ಈ) ಉನ್ನತ ಪದವಿನ್ಯಾಸ ಉ) ಭವ್ಯ ಸಂಯೋಜನೆ

ಭವ್ಯತೆ ಎಂದರೆ 'ಉನ್ನತ ಮನಸ್ಸಿನ ಪ್ರತಿಧ್ವನಿ' ಎಂದು ಲಾಂಜೈನಸ್ ಘೋಷಿಸುತ್ತಾನೆ. ರಸಋಷಿ ಕುವೆಂಪು ಅವರು ಮಹೋನ್ನತಿ, ಮಹೋಪಮೆ ಎಂದು ಹೇಳುವುಉದ ಇದನ್ನೇ. ಮುಂದುವರೆದು ಹೇಳುತ್ತ ಲಾಂಜೈನಸನು ಲೇಖಕ/ಭಾಷಣಕಾರನ ವ್ಯಕ್ತಿತ್ವಕ್ಕೂ ಅವನ ಕೃತಿ/ಮಾತಿಗೂ ಸಂಬಂಧ ಕಲ್ಪಿಸುತ್ತಾನೆ. ಒಂದು ಸಮಾಜದ ನೈತಿಕ ಸ್ತರವನ್ನು ಸಾಹಿತ್ಯಾದಿ ಕಲೆಗಳು ನಿಯಂತ್ರಿಸುತ್ತವೆ ಎನ್ನುತ್ತಾನೆ. ನಾವು ಭಾಷಣಕಾರನನ್ನು ದೈಹಿಕವಾಗಿ ನೋಡುತ್ತಿರುವಾಗ ಅವನ ವ್ಯಕ್ತಿತ್ವದ ಬಗ್ಗೆ ಗೌರವವಿಲ್ಲದಿದ್ದರೆ ಅವನ ಮಾತುಗಳು ನಮ್ಮನ್ನು ಒಲಿಯುಉದಿಲ್ಲ ಎಂದು ತಿಳಿಸುವನು. ಹೋಮರನ ಕೃತಿಯಲ್ಲಿ ಇಲಿಯಡ್ ಮಹೋನ್ನತ ಕೃತಿಯಾದರೆ 'ಒಡಿಸ್ಸಿ' ಸಾಧಾರಣ ಎನ್ನುತ್ತಾನೆ. ಒಟ್ಟಿನಲ್ಲಿ ಲಾಂಜೈನಸ್‌ನನ್ನು ಪಾಶ್ಚಿಮಾತ್ಯ ಕಾವ್ಯಮೀಮಾಂಸೆಯ ಪ್ರಪ್ರಥಮ ತೌಲನಿಕ ವಿಮರ್ಶಕ ಮತ್ತು ಪ್ರಪ್ರಥಮ ಶೈಲಿಶಾಸ್ತ್ರಜ್ಞ ಎಂದು ಗುರುತಿಸಲಾಗಿದೆ.

**2.4 ಕೊಲರಿಜ್ ಮತ್ತು ಪ್ರತಿಭೆ**: ಹತ್ತೊಂಬತ್ತನೇ ಶತಮಾನದ ರಮ್ಯ ಸಂಪ್ರದಾಯದ (Romantic Age of Poetry) ವರ್ಡ್ಸ್‌ವರ್ತ್ ಮತ್ತು ಕೊಲರಿಜ್ ಕವಿಗಳು ಮೀಮಾಂಸೆಯನ್ನು ಕುರಿತೂ ಚಿಂತಿಸಿದರು. ವರ್ಡ್ಸ್‌ವರ್ತ್ ಕವಿಯು ತನ್ನ 'ಲಿರಿಕಲ್ ಬ್ಯಾಲಡ್ಸ್' ಕಾವ್ಯಸಂಗ್ರಹಕ್ಕೆ ಬರೆದ ಮುನ್ನುಡಿ ಮತ್ತು ಕೊಲರಿಜ್ ತನ್ನ 'ಬಯೊಗ್ರಾಫಿಯ ಲಿಟರೇರಿಯ' ಕೃತಿಯಲ್ಲಿ ಇದನ್ನು ಚರ್ಚಿಸುವರು. ವರ್ಡ್ಸ್‌ವರ್ತ್ ದೃಷ್ಟಿಯಲ್ಲಿ ಕಾವ್ಯವೆಂದರೆ 'ಸ್ಫೂರ್ತಿಯಿಂದ ಉಕ್ಕಿದ ಭಾವನೆಗಳ ಓತಪ್ರೋತ' (Spontenous overflow of powerful feelings) ಹಾಗಾಗಿ ವರ್ಡ್ಸ್‌ವರ್ತ್‌ನು ಪ್ರತಿಭೆ ಮತ್ತು ಕಲ್ಪನೆ (Imagination & Fancy) ಇವನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತಾನಾದರೂ ಸ್ಪಷ್ಟವಾಗಿ ತಿಳಿಸುವವನು ಕೊಲರಿಜ್ ಕವಿಯೇ. ಕೊಲರಿಜ್ ಪ್ರಕಾರ ಉತ್ತಮ ಕಾವ್ಯದಲ್ಲಿ ನಮಗೆ ಕಂಡು ಬರುವುದು ಪ್ರತಿಭೆಯೆ ವಿನಾ ಕಲ್ಪನೆಯಲ್ಲ. ಕಲ್ಪನೆ ಎಂಬುದು ನಮ್ಮ ನೆನಪಿನಶಕ್ತಿಯ ಕೌಶಲ್ಯವಷ್ಟೇ. ಪ್ರತಿಭೆಯಲ್ಲಿ ಎರಡು ವಿಧ ಎನ್ನುತ್ತಾನೆ ಕೊಲರಿಜ್. ಒಂದು, ಮೂಲ ಪ್ರತಿಭೆ (Primary Imagination) ಇನ್ನೊಂದು ಆನುಷಂಗಿಕ ಪ್ರತಿಭೆ (Secondary Imagination) ನಮ್ಮ ಮೀಮಾಂಸಕರು ಕಾರಯಿತ್ರಿ ಮತ್ತು ಭಾವಯಿತ್ರಿ ಪ್ರತಿಭೆಗಳೆಂದು ಕರೆದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮೂಲಪ್ರತಿಭೆಯೆಂಬುದು ಎಲ್ಲ ವಿಧದ ಇಂದ್ರಿಯಾನುಭವಗಳನ್ನು ಗ್ರಹಿಸುವ ಅತಿಮುಖ್ಯ ಸಾಧನ. ಇದನ್ನು ಕಾರ್ಯಗತ ಮಾಡುವುದು ಆನುಷಂಗಿಕ ಪ್ರತಿಭೆ. ಸಿಎನ್ಆರ್ ಅವರು ಈ ಸಂದರ್ಭದಲ್ಲಿ ಕೊಲರಿಜ್‌ನ ಪ್ರತಿಭೆ ಕುರಿತ ಚಿಂತನೆಯನ್ನು ದಾರ್ಶನಿಕ ತಳಹದಿಯ ಮೇಲೆ ರೂಪಿಸಿರುವ

ಪರಿಕಲ್ಪನೆಯಿದು ಎನ್ನುತ್ತಾರೆ. ಆದರೆ ಭಾರತೀಯ ಕಾವ್ಯ ಮೀಮಾಂಸಕರು ಹೇಳುವ ಅಪೂರ್ವ ವಸ್ತು ನಿರ್ಮಾಣಕ್ಷಮಾ ಪ್ರತಿಭಾ ಮತಃ, ನವನವೋನ್ಮೇಷಶಾಲಿನಿ ಪ್ರತಿಭಾ ಮತಃ, ಪ್ರತಿಭೆಯು ಶಿವನ ಮೂರನೆಯ ಕಣ್ಣಿದ್ದಂತೆ. ಅದು ಕಾವ್ಯದ ಸೃಷ್ಟಿಯೂ ಹೌದು; ದೃಷ್ಟಿಯೂ ಹೌದು ಎಂದು ಹೇಳಿರುವುದರ ಮುಂದೆ ಕೊಲರಿಜ್‌ನ ವ್ಯಾಖ್ಯಾನ ಏನೇನೂ ಅಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು.

**2.5 ಭಾರತೀಯ ಕಾವ್ಯ ಮೀಮಾಂಸೆ–ತೌಲನಿಕ ಟಿಪ್ಪಣಿಗಳು**: ಈ ಭಾಗದಲ್ಲಿ ಈವರೆಗೆ ನೋಡಲಾದ ಪಾಶ್ಚಿಮಾತ್ಯರ ವಿವೇಚನೆಗಳನ್ನು ನಮ್ಮ ಮೀಮಾಂಸೆಯೊಂದಿಗೆ ಹೋಲಿಸಿ ತೂಗುವ ಪ್ರಯತ್ನ ಮಾಡುತ್ತಾರೆ ಸಿ ಎನ್ ರಾಮಚಂದ್ರನ್ ಅವರು.

ಅ) ಭರತನ ರಸಸಿದ್ಧಾಂತ ಮತ್ತು ಅರಿಸ್ಟಾಟಲನ ಕಥಾರ್ಸಿಸ್ ಪರಿಕಲ್ಪನೆ– ಇವೆರಡರ ನಡುವೆ ಸಾಮ್ಯವಿದೆ. ಭಾರತೀಯ ಕಾವ್ಯ ಮೀಮಾಂಸೆಯು ಒಂದು ಹೆಜ್ಜೆ ಮುಂದೆ ಹೋಗಿ ನವರಸಗಳನ್ನು ವ್ಯಾಖ್ಯಾಸಿದಿರೆ ಅರಿಸ್ಟಾಟಲನು ಕೇವಲ ಭಯ ಮತ್ತು ಕರುಣರಸಗಳಿಗಷ್ಟೇ ಪ್ರಾಧಾನ್ಯ ನೀಡುವನು. ಸಿಎನ್‌ಆರ್ ಅವರು ಮುಂದುವರೆದು ಎಲಿಯಟ್ ತಿಳಿಸಿದ ವಸ್ತುಪ್ರತಿರೂಪ (Objective correleative) ಪರಿಕಲ್ಪನೆಯಿಂದಲೂ ಇವನ್ನು ಅರ್ಥೈಸಿಕೊಳ್ಳಬಹುದು ಎನ್ನುತ್ತಾರೆ. ವಸ್ತುಪ್ರತಿರೂಪವೆಂದರೆ ಕಲಾಕೃತಿಯಲ್ಲಿ ಬಳಸಲಾಗುವ ವಾಸ್ತವ ಜಗತ್ತಿನ ಬಿಂಬರೂಪಗಳು.

ಆ) ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ರೀತಿ ಮತ್ತು ಗುಣಪ್ರಸ್ಥಾನಗಳು ಕಂಡುಬಂದ ಹಾಗೆ, ಪಾಶ್ಚಿಮಾತ್ಯರಲ್ಲಿ ಶೈಲಿಶಾಸ್ತ್ರ (Stylistics) ವು ಮಹೋನ್ನತವಾಗಿ ಬೆಳೆಯಿತು. ನಮ್ಮಲ್ಲಿಯೂ ವಾಮನನ ರೀತಿರಾತ್ಮಕಾವ್ಯಸ್ಯ, ವಿಶಿಷ್ಠ ಪದರಚನಾರೀತಿಃ, ಪದಸಂಘಟನೆ ಮುಂತಾದ ವಿಚಾರಗಳು ಇರುವುದನ್ನು ಇಲ್ಲಿ ನೆನೆಯಬಹುದು.

ಇ) ಹೊರೆಸ್‌ನ ಔಚಿತ್ಯ ಪರಿಕಲ್ಪನೆಯನ್ನು ನಮ್ಮಲ್ಲಿ ಬಂದ ಕ್ಷೇಮೇಂದ್ರನ ಔಚಿತ್ಯ ಸಿದ್ಧಾಂತಕ್ಕೆ ಹೋಲಿಸಿ ನೋಡಬಹುದು. ಈ ಸಂದರ್ಭದಲ್ಲಿ **'ಹೊರೆಸನ ಸಾಹಿತ್ಯ ವಿಮರ್ಶೆ'** ಪುಸ್ತಕ ಬರೆದಿರುವ ಎನ್ ಬಾಲಸುಬ್ರಹ್ಮಣ್ಯ ಅವರು ಹೊರೆಸ್ ಮತ್ತು ಕ್ಷೇಮೇಂದ್ರರನ್ನು ತೂಗಿ ನೋಡುವ ಕೆಲಸ ಮಾಡಿಲ್ಲ ಎಂದು ಸಿಎನ್‌ಆರ್ ಆಕ್ಷೇಪಿಸುತ್ತಾರೆ.

ಈ) ಅದೇ ರೀತಿಯಲ್ಲಿ, ನಮ್ಮಲ್ಲಿ, ಅಲಂಕಾರಪ್ರಸ್ಥಾನವು ಕುಂತಕನ ವಕ್ರೋಕ್ತಿಸಿದ್ಧಾಂತದ ಮೂಲಕ ಹಾದುಬಂದು ಗಂಭೀರತೆಯನ್ನು ಪಡೆಯಿತು. ಇನ್ನೊಂದು ಕಡೆ ಇದನ್ನರಿಯದ ಕೆಲವು ಆಲಂಕಾರಿಕರು ಕಾವ್ಯಾಲಂಕಾರದ ಸಂಖ್ಯೆಯನ್ನು ಹೆಚ್ಚಿಸುವುದರತ್ತ ಗಮನ ಕೊಟ್ಟರು ಎಂದು ಹೇಳುತ್ತಾರೆ. ಇದು ನಿಜ ಕೂಡ. ಇನ್ನೂ ಮುಂದುವರೆದು ರಷ್ಯನ್ ರೂಪನಿಷ್ಠ ಚಿಂತಕರು ಅದರಲ್ಲೂ ಮುಖ್‌ಶೊವ್‌ಸ್ಕಿ ಎಂಬ ಮೀಮಾಂಸಕನು, ಕುಂತಕ ಮಂಡಿಸಿದ ಸಿದ್ಧಾಂತವನ್ನೇ ಹೋಲುವ ಚರ್ಚೆ ಮಾಡಿದ್ದಾನೆಂದು ತಿಳಿಸುತ್ತಾರೆ. ಇವರಿಬ್ಬರ ನಡುವಿನ ಸಾಮ್ಯತೆ ನಮ್ಮನ್ನು ಚರಿತರನ್ನಾಗಿಸುತ್ತದೆ ಎಂದಿದ್ದಾರೆ. ಕೊನೆಯದಾಗಿ ರಸ ಮತ್ತು ಧ್ವನಿಪ್ರಸ್ಥಾನಗಳಿಗೆ ಸಿಕ್ಕಷ್ಟು ಮನ್ನಣೆ ವಕ್ರೋಕ್ತಿಪ್ರಸ್ಥಾನಕ್ಕೂ ಸಿಕ್ಕಿದ್ದರೆ ಭಾರತೀಯ ಕಾವ್ಯಮೀಮಾಂಸೆಯ ದಿಕ್ಕು ಬೇರೆಯಾಗುತ್ತಿತ್ತು ಎಂದು ಅಭಿಪ್ರಾಯಿಸುವರು.

**2.6 ಮಾದರಿಯ ಬದಲಾವಣೆ** (paradigm Shift) ಸಾಹಿತ್ಯಕೃತಿಯು ಆಯಾಯ ಕಾಲಧರ್ಮ–ಯುಗಧರ್ಮ ಮತ್ತು ಮನೋಧರ್ಮಗಳಿಗನುಸಾರ ರಚಿತಗೊಳ್ಳುವಾಗ ವಿಮರ್ಶಾ ರೀತಿಯೂ ಬದಲಾಗುತ್ತವೆಂಬುದು ಸಹಜ. ಆದ್ದರಿಂದ ಕಾಲದಿಂದ ಕಾಲಕ್ಕೆ ಬದಲಾಗುವ ಸಾಮಾಜಿಕ ರಚನೆ ಮತ್ತು ವೈಚಾರಿಕತೆಗಳನ್ನನುಸರಿಸಿ ವಿಮರ್ಶಿಸುವ ವಿಧಾನಕ್ಕೆ **'ಮಾದರಿಯ ಬದಲಾವಣೆ'** ಎಂದು ವಿದ್ವಾಂಸರು ಕರೆದಿದ್ದಾರೆ. ಒಂದು ನೂತನ ಮಾದರಿ ಎಂದರೆ ನೂತನ ವಿಮರ್ಶಾಪ್ರಸ್ಥಾನದ ಜನ್ಮ. ಇಂತಹ ಸತತ ಬದಲಾವಣೆಯು ಒಂದು ಜೀವಂತ ಸಮಾಜದ ಲಕ್ಷಣ ಎನ್ನುತ್ತಾರೆ ಸಿಎನ್‌ಆರ್. ಕೃತಿ, ಕೃತಿಕಾರ, ಓದುಗ, ಆ ಸಮಾಜದ ವೈಚಾರಿಕ ಮತ್ತು ಸಾಂಸ್ಕೃತಿಕ ಸಂಹಿತೆ– ಇವನ್ನು ಅನುಸರಿಸಿ ವಿಮರ್ಶಾಮಾರ್ಗಗಳು ಹುಟ್ಟಿಕೊಳ್ಳುತ್ತವೆ. ಉದಾಹರಣೆಗೆ, ಕರ್ತೃಕೇಂದ್ರಿತವಿಮರ್ಶೆ, ಕೃತಿಕೇಂದ್ರಿತ ವಿಮರ್ಶೆ, ವಾಚಕಕೇಂದ್ರಿತ ವಿಮರ್ಶೆ ಇತ್ಯಾದಿ.

**3. ಆಧುನಿಕ ವಿಮರ್ಶಾ ಪ್ರಸ್ಥಾನಗಳು**: ಅಂದರೆ, ವಿಮರ್ಶೆಯ ಹಲವು ವಿಧಗಳು: ವಿಮರ್ಶೆ ಎಂದರೆ ಇಲ್ಲಿ ಸಾಹಿತ್ಯವಿಮರ್ಶೆ. ಸಾಹಿತ್ಯ ವಿಮರ್ಶೆ ಮಾಡುವವರು ಸಾಹಿತ್ಯ ವಿಮರ್ಶಕರು. ಇವರು ತಂತಮ್ಮ ಧೋರಣೆಗನುಸಾರ ತಮಗೆ ಸರಿಯೆನಿಸಿದ ಪ್ರಸ್ಥಾನವನ್ನಾಯ್ದುಕೊಂಡು ಕೃತಿಯನ್ನು ವಿಮರ್ಶಿಸುತ್ತಾರೆ. ಒಂದೊಂದು ವಿಮರ್ಶಾಪಂಥಕ್ಕೂ ಅದರದರ ಇತಿಹಾಸ ಮತ್ತು ಬೆಳವಣಿಗೆ ಇದೆ. ವಿಮರ್ಶೆಯ ವಿಧಗಳಲ್ಲಿ ಮುಖ್ಯವಾಗಿ ಕರ್ತೃಕಏಂದ್ರಿತ ವಿಮರ್ಶೆ, ಕೃತಿಕೇಂದ್ರಿತ, ಸಮಾಜಕೇಂದ್ರಿತ, ಮಾರ್ಕ್ಸ್‌ವಾದಿ ವಿಮರ್ಶೆ, ಸ್ತ್ರೀವಾದಿ ವಿಮರ್ಶೆ, ರಾಚನಿಕ ವಿಮರ್ಶೆ, ನವ್ಯವಿಮರ್ಶೆ, ಪ್ರಯೋಗಿಕ ವಿಮರ್ಶೆ ಇತ್ಯಾದಿ ಹಲವು ಬಗೆಗಳಿವೆ. ಇವುಗಳಲ್ಲಿ ಅಭ್ಯಾಸಕ್ಕಿರುವುದು ಎರಡೇ: ಒಂದು, ಕರ್ತೃಕೇಂದ್ರಿತ ಇನ್ನೊಂದು ಸಮಾಜಕೇಂದ್ರಿತ.

ಕರ್ತೃಕೇಂದ್ರಿತವಿಮರ್ಶೆಯಲ್ಲಿ ಎರಡು ಒಳಭಾಗ: ಅ. ಕರ್ತೃನಿಷ್ಠ (Biographical) ಆ. ಮನೋವೈಜ್ಞಾನಿಕ (Psychological)
ಸಮಾಜಕೇಂದ್ರಿತ ವಿಮರ್ಶೆಯಲ್ಲಿ ಮೂರು ಒಳಭಾಗ: ಅ. ಚಾರಿತ್ರಿಕ (Historical) ಆ. ಮಾರ್ಕ್ಸ್‌ವಾದಿ (Marxist) ಇ. ಸ್ತ್ರೀನಿಷ್ಠ (Feminist)

———————————————

**3.1 ಕರ್ತೃಕೇಂದ್ರಿತ ವಿಮರ್ಶೆ**ಯಲ್ಲಿ ಕೃತಿಗಿಂತ ಅದರ ರಚನಾಕಾರನ/ಳನ್ನು ಪರಿಗಣಿಸಲಾಗುವುದು. ಇದರಲ್ಲಿ ಕರ್ತೃನಿಷ್ಠ ವಿಮರ್ಶೆಯು ನೇರವಾಗಿ ಕೃತಿಕಾರನ ಮೂಲಕವೇ ಕೃತಿಯನ್ನು ಪರಾಂಬರಿಸುವುದು. ಇದರ ಮುಖ್ಯ ಪ್ರಣಾಳಿಗಳು ಹೀಗಿವೆ: ಅ) ಪ್ರತಿಯೊಬ್ಬ ವ್ಯಕ್ತಿಯೂ ವಿಭಿನ್ನವಾಗಿರುವಂತೆ ಪ್ರತಿ ಲೇಖಕನೂ/ಳೂ ವಿಭಿನ್ನ ಮತ್ತು ವಿಶಿಷ್ಟ. ಆ) ಸಾಹಿತ್ಯಕ್ಕೂ ಮತ್ತು ಲೇಖಕರ ವ್ಯಕ್ತಿತ್ವಕ್ಕೂ ಗಾಢವಾದ ಸಂಬಂಧವಿದೆ. ಇ) ಯಾವುದೇ ಸಾಹಿತ್ಯಕೃತಿಯು ಆಯಾ ಲೇಖಕನ/ಳ ವೈಯಕ್ತಿಕ ಅನುಭವ ಮತ್ತು ಅನಿಸಿಕೆಗಳ ದಾಖಲೆಯೇ ಆಗಿರುತ್ತದೆ.

**3.1.1 ಕರ್ತೃನಿಷ್ಠ ವಿಮರ್ಶೆ**ಯಲ್ಲಿ ಕೃತಿಗಿಂತ ಕೃತಿಯ ರಚನಾಕಾರರಿಗೆ ಹೆಚ್ಚಿನ ಗಮನ. ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯಲ್ಲಿ ಇದಕ್ಕೆ ಮೂರುನೂರು ವರ್ಷಗಳ ಇತಿಹಾಸವಿದೆ. ಈ ವಿಮರ್ಶಾ ಮಾರ್ಗದ ಪ್ರಮುಖ ವಕ್ತಾರನೆಂದರೆ ವಿಮರ್ಶಕ ಸಾಂತ್‌ಬೊವ್. ಲೇಖಕನ್ನು ಕುರಿತು ನನಗಿರುವ ತಿಳಿವಳಿಕೆಯನ್ನು ಪಕ್ಕಕ್ಕಿಟ್ಟು ನಾನು ಅವನ ಕೃತಿಯ ಮೌಲ್ಯನಿರ್ಣಯ ಮಾಡಲು ನನಗಂತೂ ಅಸಾಧ್ಯ ಎಂದು ತಿಳಿಸುತ್ತಾನೆ. ಲೇಖಕರ ವೈಯಕ್ತಿಕ ಸಂಗತಿ/ಅನುಭವಗಳನ್ನು ಕೃತಿಯ ಚರ್ಚೆಯಲ್ಲಿಟ್ಟು ನೋಡುವ ಇಂಥ ಕ್ರಮಕ್ಕೆ ಜನಡುಮಾರ್ಗ (The road to Xanadu) ಎಂದು ಕರೆದರು. ಇದನ್ನು ತಿಳಿಸಿಕೊಟ್ಟವನು ಜಾನ್ ಲಿವಿಂಗ್‌ಸ್ಟನ್‌ಲೋಜ್ ಎಂಬ ವಿದ್ವಾಂಸ. ಇಪ್ಪತ್ತನೇ ಶತಮಾನದ ಮೊದಲಭಾಗದಲ್ಲಿ ಬಂದ ಎಲಿಯಟ್, ಲೀವಿಸ್ ಮುಂತಾದ ನವ್ಯವಿಮರ್ಶಕರು ಈ ಕರ್ತೃನಿಷ್ಠ ವಿಮರ್ಶೆಯನ್ನು ವಿರೋಧಿಸಿದರು. ಕಾವ್ಯವೆಂದರೆ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲ; ವ್ಯಕ್ತಿತ್ವದಿಂದ ಮುಕ್ತವಾಗುವುದು ಎಂದು ಎಲಿಯಟ್ ಘೋಷಿಸಿ ಪರೋಕ್ಷವಾಗಿ ಕೃತಿನಿಷ್ಠ ವಿಮರ್ಶೆಯ ತಳಹದಿಗೆ ನಾಂದಿ ಹಾಡಿದನು.

ಕರ್ತೃನಿಷ್ಠ ವಿಮರ್ಶೆಯ ಒಂದು ದೊಡ್ಡ ದೌರ್ಬಲ್ಯವೆಂದರೆ, ಕೃತಿಯು ಉದ್ದೇಶಪೂರ್ವಕವಾಗಿ ರೂಪಿಸಲ್ಪಟ್ಟ ರಚನೆ ಎಂಬ ತಾತ್ತ್ವಿಕನಂಬಿಕೆ. ಇದರ ಜೊತೆಗೆ ಲೇಖಕರೇ ತಮ್ಮ ಕೃತಿಯ ಬಗ್ಗೆ ಏನೇ ಹೇಳಿಕೊಂಡರೂ ಅದನ್ನು ಕೃತಿಯ ಅಂಗಭಾಗವೆಂದು ತಿಳಿಯುವುದು ಎಷ್ಟು ಸೂಕ್ತ? ಎಂಬ ಪ್ರಶ್ನೆ ಏಳುತ್ತದೆ. ಒಂದು ಪಕ್ಷ ಬರೆಹಗಾರ ತನ್ನ ಬರೆಹವನ್ನು ಹೀಗೇ ನೋಡಬೇಕೆಂದು ನಿರ್ದೇಶಿಸಿದರೂ ಕೃತಿಯಲ್ಲಿ ಅದು ಸಾಧಿತವಾಗದೇ ಇರಬಹುದು. ಹಾಗೆಂದು ಕರ್ತೃನಿಷ್ಠ ವಿಮರ್ಶೆಯನ್ನು ಪೂರ್ಣಪ್ರಮಾಣದಲ್ಲಿ ತಳ್ಳಿಹಾಕಲಾಗದು. ಸಾಹಿತಿಯ ವ್ಯಕ್ತಿತ್ವವು ಪರೋಕ್ಷವಾಗಿ ಕೃತಿಯ ಓದು ಮತ್ತು ವಿಮರ್ಶೆಯ ಮೇಲೆ ಪ್ರಭಾವ ಬೀರುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಈ ಮಾತು ಸಾಹಿತಿಯ ವ್ಯಕ್ತಿತ್ವ ಗೊತ್ತಿಲ್ಲದವರಿಗೆ ಅನ್ವಯಿಸುವುದಿಲ್ಲವಲ್ಲ!

**3.1.2 ಮನೋವೈಜ್ಞಾನಿಕ ವಿಮರ್ಶೆ**: ಮನೋವಿಜ್ಞಾನಕ್ಕೂ ಸಾಹಿತ್ಯಕ್ಕೂ ನಿಕಟ ಸಂಬಂಧವಿದೆ. ಬರೆಹಗಾರರು ಪಾತ್ರಗಳ ಮನೋಭೂಮಿಕೆಯನ್ನು ಸಿದ್ಧಮಾಡಿ, ಪಾತ್ರಪೋಷಣೆ ಮಾಡುವಾಗಲಾಗಲಿ, ಪಾತ್ರಗಳ ಅಂತರಾಳ ಶೋಧಿಸುವುದರ ಮೂಲಕ ಕೃತಿಯ ಆಶಯವನ್ನು ಅರ್ಥೈಸುವಾಗಲಾಗಲಿ ಮನೋವಿಜ್ಞಾನದ ಸಿದ್ಧಾಂತಗಳನ್ನು ಬಳಸಿಕೊಳ್ಳಬಹುದು ಅಥವಾ ಕೃತಿವಿಮರ್ಶೆಯಲ್ಲಿ ಮನೋವಿಶ್ಲೇಷಣೆಯನ್ನು ಪ್ರಮುಖವಾಗಿ ಪರಿಗಣಿಸಬಹುದು. ಹಾಗೆ ನೋಡಿದರೆ, ಅರಿಸ್ಟಟಲನ ಶೋಧನೆ (ಕಥಾಸಿರ್ಸ್) ಪರಿಕಲ್ಪನೆಯೇ ಸಾಹಿತ್ಯ ವಿಮರ್ಶೆ ಮತ್ತು ಮನಶ್ಶಾಸ್ತ್ರಗಳಿಗೆ ಸಂಬಂಧ ಕಲ್ಪಿಸುತ್ತವೆ ಎಂದೆನ್ನುತ್ತಾರೆ ಸಿಎನ್‌ಆರ್ ಅವರು. ಆದರೆ ಇಂದು ಪ್ರಚಲಿತವಾಗಿರುವ ಮನೋವೈಜ್ಞಾನಿಕ ವಿಮರ್ಶೆ ಇಪ್ಪತ್ತನೇ ಶತಮಾನದ ಕೊಡುಗೆ. ಸಿಗ್ಮಂಡ್‌ಫ್ರಾಯ್ಡ್, ಸಿ ಜಿ ಯೂಂಗ್, ಟಿ ಇ ಹ್ಯೂಮ್ ಮತ್ತು ಆ್ಯಡ್ಲರ್ ಮೊದಲಾದ ಮನೋವಿಜ್ಞಾನಿಗಳ ತತ್ತ್ವ ಮತ್ತು ಸಿದ್ಧಾಂತಗಳನ್ನು ಆಧರಿಸಿ ಅವುಗಳ ನೆಲೆಯಲ್ಲಿ ಸಾಹಿತ್ಯಕೃತಿಗಳನ್ನು ಅರ್ಥೈಸುವ ವಿಧಾನವಿದೆ. ಫ್ರಾಯ್ಡ್‌ವಾದಿ ವಿಮರ್ಶೆ, ನವಫ್ರಾಯ್ಡ್‌ವಾದಿ ವಿಮರ್ಶೆ, ಯೂಂಗ್‌ವಾದಿ ವಿಮರ್ಶೆ, ಚಿರಂತನ ಪ್ರತೀಕ ವಿಮರ್ಶೆ ಎಂದೆಲ್ಲ ಸಮೃದ್ಧವಾಗಿ ಬೆಳೆದಿದೆ. ಮನೋವೈಜ್ಞಾನಿಕ ವಿಮರ್ಶೆಯು ಮುಖ್ಯವಾಗಿ ಮನೋವಿಜ್ಞಾನದ ಸಿದ್ಧಾಂತಗಳನ್ನು ನೆಲೆಗಟ್ಟನ್ನಾಗಿ ತೆಗೆದುಕೊಳ್ಳುತ್ತದೆ:

ಅ) ಕೃತಿನಿರ್ಮಾಣದಲ್ಲಿ ಲೇಖಕನ ಜಾಗೃತಪ್ರಜ್ಞೆಗಿಂತ ಸುಪ್ತಪ್ರಜ್ಞೆಯ ಪ್ರಭಾವ ಹೆಚ್ಚು

ಆ) ಲೇಖಕನಿಗೂ ಮತ್ತು ಅವನಿಂದ ರಚಿಸಲ್ಪಟ್ಟ ಕೃತಿಗೂ ನೇರ ಸಂಬಂಧವಿದೆ.

ಇ) ಸಾಹಿತ್ಯವಿಮರ್ಶೆಯನ್ನು ವರ್ತನಶಾಸ್ತ್ರದ ಒಂದು ಭಾಗವೆಂದೇ ಪರಿಗಣಿಸಬೇಕು.

ಈ ವಿಮರ್ಶಾಪಂಥದಲ್ಲಿ ಮೂರು ಸ್ವತಂತ್ರ ಮಾರ್ಗಗಳನ್ನು ಗುರುತಿಸುತ್ತಾರೆ.

ಒಂದು, ಸೃಷ್ಟಿಕ್ರಿಯೆಯ ವ್ಯಾಖ್ಯಾನ ಎರಡು, ಲೇಖಕನ ವ್ಯಕ್ತಿತ್ವ ವಿಶ್ಲೇಷಣೆ ಮೂರು, ಪಾತ್ರ ವಿಶ್ಲೇಷಣೆ

ಮೊದಲನೆಯ ಮಾರ್ಗವನ್ನು ಫ್ರಾಯ್ಡ್, ಯೂಂಗ್ ಮತ್ತು ಐ ಎ ರಿಚರ್ಡ್ಸ್ ಪ್ರತಿಪಾದಿಸುವರು. ಎರಡನೆಯ ಮಾರ್ಗವನ್ನು ವ್ಯಾನ್‌ವಿಕ್‌ಬ್ರೂಕ್ಸ್, ಎಡ್ಮಂಡ್ ವಿಲ್ಸನ್ ಪ್ರತಿಪಾದಿಸಿದರೆ ಮೂರನೆಯ ಮಾರ್ಗವನ್ನು ಅರ್ನೆಸ್ಟ್ ಜೋನ್ಸ್, ಎರಿಕ್‌ಫ್ರಾಮ್, ಎರಿಕ್ ಎರಿಕ್‌ಸನ್ ಮೊದಲಾಧವರು ವಿವರಿಸಿದ್ದಾರೆ. ಒಟ್ಟು ಕಲಾಸೃಷ್ಟಿಯ ನಿಗೂಢವನ್ನು ಈ ವಿಮರ್ಶಾಪಂಥವು ವ್ಯಾಖ್ಯಾನಿಸ ತೊಡಗುತ್ತದೆ. ಹಾಗಾಗಿ, ಲೇಖಕನ ಆಂತರಿಕ ಮಾನಸಿಕ ವ್ಯಕ್ತಿತ್ವವನ್ನು ವಿಶ್ಲೇಷಿಸಲಾಗುವುದು. ಕೃತಿಯ ಮೂಲಕ ಕೃತಿಕಾರನನ್ನು ಅರ್ಥೈಸುವುದೇ ಇದರ ಗುರಿ. ಕೃತಿಯ ಪಾತ್ರಗಳನ್ನು ಮನೋವೈಜ್ಞಾನಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಲಾಗುವುದು. ಅಂದರೆ ಸಾಹಿತ್ಯಕೃತಿಯ ಅನನ್ಯತೆ ಮತ್ತು ಸ್ವತಂತ್ರತೆಗಳನ್ನು ಈ ಪಂಥ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಮನೋವೈಜ್ಞಾನಿಕ ಸಿದ್ಧಾಂತಗಳಿಗೆ ಬೇಕಾದ ನಿದರ್ಶನಗಳಿಗಾಗಿಯಷ್ಟೇ ಸಾಹಿತ್ಯಕೃತಿ ಉದಾಹೃತಗೊಳ್ಳುತ್ತದೆಂಬ ಟೀಕೆ ಇದರ ಮೇಲಿದೆ. ಜೊತೆಗೆ ಮನೋವಿಜ್ಞಾನಿಯು ಕೃತಿಕಾರನನ್ನು ಓರ್ವ ಮಾನಸಿಕರೋಗಿ ಎಂದು ತಿಳಿಯುವ ಸಂಭವವೇ ಹೆಚ್ಚು. ಮನೋವೈಜ್ಞಾನಿಕ ವಿಮರ್ಶಕನಿಗೆ ಸಾಹಿತ್ಯ ಕೃತಿಗಳೆಲ್ಲವೂ 'ಕೇಸ್ ಹಿಸ್ಟರಿ'ಗಳಾಗಿ ಬಿಡುವ ಅಪಾಯವಿದೆ.

-------------

**3.2 ಸಮಾಜಕೇಂದ್ರಿತ ವಿಮರ್ಶೆ**: ಕೃತಿಯಲ್ಲಿ ವ್ಯಕ್ತವಾದ ಸಮಾಜ ಮತ್ತು ಕೃತಿಕಾರನಿರುವ ಸಮಾಜ– ಎರಡನ್ನೂ ಇಂಥ ವಿಮರ್ಶೆಯಲ್ಲಿ ಗಣನೆಗೆ ಬರುತ್ತದೆ. ಇದರಲ್ಲಿ ಮೂರು ಒಳವಿಭಾಗಗಳುಂಟು. ಅ) ಚಾರಿತ್ರಿಕ ವಿಮರ್ಶೆ ಆ) ಮಾರ್ಕ್ಸ್‌ವಾದಿ ವಿಮರ್ಶೆ ಇ) ಸ್ತ್ರೀನಿಷ್ಠ ವಿಮರ್ಶೆ

**3.2.1 ಚಾರಿತ್ರಿಕ ವಿಮರ್ಶೆ**ಯು ಚರಿತ್ರೆಯ ಕಾಲ ಮತ್ತು ಗತಿಗಳನ್ನು ಅನುಸರಿಸಿ ರೂಪುಗೊಂಡಿದೆ. ಲೇಖಕರ ಕೃತಿಗಳನ್ನು ಪುನರ್ ಸಂಪಾದಿಸುವುದು, ಒಂದು ಕೃತಿಯ ಮೇಲೆ ಪ್ರಭಾವ ಬೀರುವ ಕೃತಿಗಳನ್ನು ಸಂಶೋಧಿಸುವುದು, ಪ್ರಾಚೀನ ಕಾಲದ ಕೃತಿಯ ಪಾಠಾಂತರಗಳನ್ನು ಪರಿಶೀಲಿಸಿ ಯೋಗ್ಯ 'ಪಠ್ಯ'ವನ್ನು ಸಿದ್ಧಪಡಿಸುವುದು, ಕೃತಿಕಾರನ ಜೀವನಚರಿತ್ರೆಯನ್ನು ಸಿದ್ಧಪಡಿಸುವುದು ಇವೆಲ್ಲವೂ ಚಾರಿತ್ರಿಕ ವಿಮರ್ಶೆಯ ವ್ಯಾಪ್ತಿಯೊಳಗೇ ಬರುತ್ತವೆ. ಇದರ ಜನಕನೆಂದರೆ ಹತ್ತೊಂಬತ್ತನೇ ಶತಮಾನದ ಫ್ರೆಂಚ್ ವಿಮರ್ಶಕ–ಇತಿಹಾಸಕಾರ ಹಿಪೋಲಿಟ್ ಟೇನ್. ತನ್ನ 'ಇಂಗ್ಲಿಷ್ ಸಾಹಿತ್ಯದ ಇತಿಹಾಸ' ಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ ಚಾರಿತ್ರಿಕ ವಿಮರ್ಶೆಯ ಮೂಲಸಿದ್ಧಾಂತಗಳನ್ನು ವಿವರಿಸುತ್ತಾನೆ. ಆಗ ಎಲ್ಲರೂ 'ಅಂತೂ ಕೊನೆಗೆ ವ್ಯಕ್ತಿನಿರಪೇಕ್ಷ ವಿಮರ್ಶೆ ಸಾಧ್ಯವಾಯಿತು' ಎಂದು ಭಾವಿಸಿದರು. ಸಾಹಿತ್ಯದ ಚರಿತ್ರೆಯ ಪುಸ್ತಕಗಳು ಆಗ ವ್ಯಾಪಕವಾಗಿ ಹೊರಬಂದವು. ಇದರ ವಿರುದ್ಧ ದನಿ ಎತ್ತಿದವರು ಅಮೆರಿಕನ್ ನವ್ಯ ವಿಮರ್ಶಕರು. ಎಲಿಯಟ್, ರ್‍ಯಾನ್‌ಸಮ್, ಕ್ಲಿಯಾಂತ್‌ಬ್ರೂಕ್ಸ್ ಮೊದಲಾದವರು ಟೀಕಿಸಿದರು. ಚಾರಿತ್ರಿಕ ವಿಮರ್ಶೆಯು ಕ್ರಮೇಣ ಯಾಂತ್ರಿಕವಾಗುತ್ತದೆ, ಜಡವಾಗುತ್ತದೆ. ಇಂತಹ ಸನ್ನಿವೇಶವು ಇಂತಿಂಥ ಲೇಖಕನಿಗೇ/ಕೃತಿಗಳಿಗೇ ಜನ್ಮ ನೀಡುತ್ತದೆ ಎಂದು ನಿರ್ಣಯಿಸುವುದು ಸರಿಯಲ್ಲ. ಸಾಮಾಜಿಕ–ಸಾಹಿತ್ಯದ ಪರಿಸರವು ಎಲ್ಲ ಲೇಖಕರ ಮೇಲೆ ಸಮಾನವಾಗಿ ಪ್ರಭಾವ ಬೀರುವುದಿಲ್ಲ. ದೈನಂದಿನ ವಾರ್ತೆಗಳನ್ನು ಸಾರ್ವಕಾಲಿಕ ಸತ್ಯವೆಂದು ತೀರ್ಮಾನಿಸುವ ಸಾಧ್ಯತೆಯಿದೆ. ಇದು ಅವರು ಪಟ್ಟಿ ಮಾಡಿದ ಲೋಪಗಳು.

ಚಾರಿತ್ರಿಕ ವಿಮರ್ಶೆಯ ಇನ್ನೊಂದು ಮುಖ್ಯ ಕವಲೆಂದರೆ 'ವಿಚಾರಗಳ ಚರಿತ್ರೆ' (Hiistory of Ideas) ಇದರ ಪ್ರತಿಪಾದಕ ಎ ಓ ಲವ್‌ಜಾಯ್. ಕನ್ನಡದಲ್ಲಿ ಆರ್ ನರಸಿಂಹಾಚಾರ್ ಅವರ ಕವಿಚರಿತೆ, ರಂಶ್ರೀ ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ, ಸಿ ವೀರಣ್ಣನವರ ಕನ್ನಡಸಾಹಿತ್ಯ: ಚಾರಿತ್ರಿಕ ಬೆಳವಣಿಗೆ– ಇವು ಚಾರಿತ್ರಿಕ ವಿಮರ್ಶೆಯ ಕೆಲವು ಉದಾಹರಣೆಗಳು.

ಕಳೆದ ಮೂರು ದಶಕಗಳಿಂದ ಚಾರಿತ್ರಿಕ ವಿಮರ್ಶೆಯು ನವಚಾರಿತ್ರಿಕವಾದ (New Historicism) ಎಂಬ ಹೆಸರಿನಲ್ಲಿ ಮರುಹುಟ್ಟು ಪಡೆದು ಪ್ರಭಾವಶಾಲಿಯಾಗಿದೆ. ನವಚಾರಿತ್ರಿಕವಾದದ ಪ್ರಮುಖ ವಕ್ತಾರರೆಂದರೆ ಸ್ಟೀಫನ್ ಗ್ರೀನ್‌ಬ್ಲಾಟ್, ಲೂಯಿ ಮಾನ್‌ಟ್ರೋಸ್ ಮತ್ತು ಕ್ಲಿಫರ್ಡ್‌ಜೀರ್ಟ್ಸ್. ಮೊದಲಿಗೆ ಹುಟ್ಟಿ ಹಾಕಿದವನು ಗ್ರೀನ್‌ಬ್ಲಾಟ್ ಎಂಬಾತನೇ. ಚರಿತ್ರೆಯ ಗತಿ ಸದಾ ಏಕಮುಖವಾಗಿರುವುದಿಲ್ಲ, ಚರಿತ್ರೆಯೆಂದರೆ ಆಕಸ್ಮಿಕಗಳ ಚರಿತ್ರೆ. ಸಾಹಿತ್ಯಕೃತಿಗಳನ್ನು ಅವುಗಳ ರಾಜಕೀಯ–ಸಾಂಸ್ಕೃತಿಕ ಸಂದರ್ಭಗಳಿಂದ ಹೊರತುಪಡಿಸಿ ವ್ಯಾಖ್ಯಾನ ಮಾಡಲಾಗದು. ಇದಿಷ್ಟು ನವಚಾರಿತ್ರಿಕವಾದದ ಆಶಯ ಮತ್ತು ಅಭಿಪ್ರಾಯ.

**3.2.2 ಮಾರ್ಕ್ಸ್‌ವಾದಿ ವಿಮರ್ಶೆ**: ಮಾರ್ಕ್ಸ್‌ವಾದವು ಆರ್ಥಿಕ–ಸಾಮಾಜಿಕ–ರಾಜಕೀಯ ಕ್ಷೇತ್ರಗಳಲ್ಲಿ ಅನ್ವಯಗೊಂಡಂತೆ ಸಾಹಿತ್ಯಕ ಕ್ಷೇತ್ರಕ್ಕೂ ತನ್ನ ಪ್ರಭಾವ ಬೀರಿದೆ. ಬೇರೆಲ್ಲ ವಿಮರ್ಶಾ ಮಾರ್ಗಗಳಿಗಿಂತ ಅತಿ ಹೆಚ್ಚು ಜನಪ್ರಿಯವಾದ ಮತ್ತು ಟೀಕೆಗಳನ್ನು ಎದುರಿಸಿದ ಮಾರ್ಗವಿದು. ಈ ಮಾರ್ಗದ ವಿಮರ್ಶಕರಿಗೆ ಇದೊಂದೇ 'ನಿಜವಾದ ಏಕಮೇವ ವಿಮರ್ಶಾಪಂಥ.' ನೈತಿಕತೆ, ಧರ್ಮ, ಅಧ್ಯಾತ್ಮ ಹಾಗೂ ವೈಚಾರಿಕತೆಯ ಮಿಕ್ಕ ಎಲ್ಲ

ರೂಪಗಳೂ ಪ್ರಜ್ಞೆಯ ಆಕೃತಿಗಳು. ಭೌತಿಕ ಉತ್ಪಾದನೆ ಮತ್ತು ಸಾಮೂಹಿಕ ಆರ್ಥಿಕಸ್ಥಿತಿಗಳೇ ಪ್ರಜ್ಞೆಯನ್ನು ನಿರ್ಧರಿಸುತ್ತವೆ. ಇದರಿಂದ ಸಾಮಾಜಿಕ ಅಸ್ತಿತ್ವ ಗಣನೆಗೆ ಬರುತ್ತದೆ. ಹಾಗಾಗಿ ಸಾಹಿತ್ಯವೂ ಸೇರಿದಂತೆ ಕಲೆ ಎಂಬುದು ಸಮಾಜದ ಮೇಲ್‌ರಚನೆಗೆ ಸೇರಿರುವುದು. ಸಮಾಜದ ಕೆಳರಚನೆಯ ಅರಿವಿಲ್ಲದೆ ಎಂದರೆ ಸಮಾಜದ ಆರ್ಥಿಕ ಸಂಬಂಧಗಳ ಪೂರ್ಣಜ್ಞಾನವಿಲ್ಲದೆ, ಮೇಲ್‌ರಚನೆಯಲ್ಲಿರುವ ಸಾಹಿತ್ಯಾದಿ ಲಲಿತಕಲೆಗಳನ್ನು ಅರ್ಥೈಸಲು ಸಾಧ್ಯವಿಲ್ಲ. ವರ್ಗಸಂಘರ್ಷವಿರುವ ಸಮಾಜಜದಲ್ಲಿ ಪ್ರಧಾನ ಸಂಸ್ಕೃತಿ ಮತ್ತು ಅಧೀನ ಸಂಸ್ಕೃತಿ ಎಂದು ಎರಡು ವಿರುದ್ಧ ದ್ರುವದಲ್ಲಿರುವ ವಿಚಾರಗಳಿಗೆ ಇದುವೇ ಮೂಲ.

ಮಾರ್ಕ್ಸ್‌ವಾದಿಗಳ ಪ್ರಕಾರ ವರ್ಗಕಲಹ ಅನಿವಾರ್ಯ. 'ಐಡಿಯಾಲಜಿ' ಎಂಬುದನ್ನು ಇವರು ಬಳಸುವುದೇ ಬೇರೆ ಅರ್ಥದಲ್ಲಿ. ಒಂದು ಕೃತಿಯ ಸಾಹಿತ್ಯಕ ಸಾಧನಗಳೆಲ್ಲ ಶ್ರೇಣೀಕೃತ ಸಮಾಜದ ಐಡಿಯಾಲಜಿಯಾಗುತ್ತದೆ. ಈ ಮಾರ್ಕ್ಸ್‌ವಾದಿ ವಿಮರ್ಶೆಯು ಕಳೆದ ಒಂದುನೂರು ವರ್ಷಗಳಲ್ಲಿ ಹಲವು ಆಯಾಮಗಳನ್ನು ಪಡೆದು ಹುಲುಸಾಗಿ ಬೆಳೆದಿದೆ. ಈ ವಿಮರ್ಶೆಯ ಮುಖ್ಯ ಸಂಗತಿಗಳನ್ನು ಪಟ್ಟಿ ಮಾಡುವುದಾದರೆ,

ಅ) ಜಾಜ್ ಲುಕಾಕ್ಸ್‌ನ ವಾಸ್ತವತಾವಾದ ಆ) ಐಡಿಯಾಲಜಿ ಮತ್ತು ಕಲೆ ಇ) ಸಾಂಸ್ಕೃತಿಕ ಯಾಜಮಾನ್ಯ ಈ) ಅನಾಥಪ್ರಜ್ಞೆ ಉ) ಕೃತಿ–ಸುಪ್ತಪ್ರಜ್ಞೆ ಮತ್ತು ರಾಜಕೀಯ ಸುಪ್ತಪ್ರಜ್ಞೆ ಊ) ಮಾರ್ಕ್ಸ್‌ವಾದ ಮತ್ತು ಜನಪ್ರಿಯ ಕಲೆಗಳು

**ಜಾಜ್ ಲುಕಾಕ್ಸ್‌ನ ವಾಸ್ತವತಾವಾದ:** ಮಾರ್ಕ್ಸ್‌ವಾದಿ ವಿಮರ್ಶೆಯಲ್ಲೇ ಅನೇಕ ಬಗೆಯ ಒಳಪಂಥಗಳಿವೆ. ಸಾಂಪ್ರದಾಯಿಕ ಮಾರ್ಕ್ಸ್‌ವಾದದ ಪ್ರಾತಿನಿಧಿಕ ವಿಮರ್ಶಕನೀತ ಹಂಗೇರಿಯವನು. ವಿಕಾಸವಾದ ಮತ್ತು ಪ್ರಕೃತಿವಾದಕ್ಕೆ ವಿರುದ್ಧವಾದ ವಾಸ್ತವತಾವಾದವನ್ನು ಈತ ಪ್ರತಿಪಾದಿಸುತ್ತಾನೆ. ಕೈಗಾರಿಕಾಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಬಂಡವಾಳಶಾಹಿ ಸಮಾಜದಲ್ಲಿ ಶ್ರೇಣೀಕೃತ ಹಾಗೂ ದ್ವಂದ್ವಾತ್ಮಕ ದೃಷ್ಟಿ ಮುನ್ನೆಲೆಗೆ ಬಂದಿತು. ಇದರಿಂದ ಎದುರಾದ ಪರಕೀಯತೆ (Alienation) ಮತ್ತು ಛಿದ್ರೀಕರಣ (Fragmentation) ಪ್ರವೃತ್ತಿಗಳನ್ನು ಕಲೆಯೆಂಬುದು ಸಫಲವಾಗಿ ಎದುರಿಸಬೇಕು. ಇಂತಹ ಕಲೆಯೇ ವಾಸ್ತವವಾದೀ ನೆಲೆಗಟ್ಟಿನದು. ಜಾರ್ಜ್‌ಲುಕಾಕ್ಸ್ ಪ್ರಕಾರ ಗ್ರೀಕ್ ಸಾಹಿತಿಗಳು, ಶೇಕ್ಸ್‌ಪಿಯರ್, ಬಾಲ್ಜಾಕ್ ಮತ್ತು ಟಾಲ್‌ಸ್ಟಾಯ್ ಇವರು ವಾಸ್ತವವಾದಿ ಲೇಖಕರು. ಲುಕಾಕ್ಸ್‌ನ ಇತರ ಮುಖ್ಯ ಪರಿಕಲ್ಪನೆಯೆಂದರೆ ಅಖಂಡತೆ (Totality) ಪ್ರಾತಿನಿಧ್ಯತೆ (Typicality) ಮತ್ತು ವಿಶ್ವ–ಚಾರಿತ್ರಿಕತೆ (World-Historical). ಅಖಂಡತೆ ಎಂದರೆ ವ್ಯಕ್ತಿಯು ತನ್ನ ಸುತ್ತಲಿನ ಪ್ರಪಂಚದಿಂದ ಪರಕೀಯವಾಗದೇ ಇದ್ದಂಥ ಸಮಾಜದ ಸ್ಥಿತಿ. ಪ್ರಾತಿನಿಧ್ಯತೆ ಎಂದರೆ ಪ್ರಗತಿಪರವಾಗಿರುವ ಕ್ರಿಯಾಶೀಲ ಶಕ್ತಿ. ವಿಶ್ವ–ಚಾರಿತ್ರಿಕತೆ ಎಂದರೆ ಈ ಜಗತ್ತಿನ ಇತಿಹಾಸದಲ್ಲಿ ಪ್ರಮುಖವಾಗಿ ಕಂಡು ಬರುವ ಆಂದೋಲನಗಳು. ಉದಾ: ಫ್ರಾನ್ಸ್, ರಷ್ಯನ್ ಕ್ರಾಂತಿಗಳು.

**ಐಡಿಯಾಲಜಿ ಮತ್ತು ಕಲೆ:** ಮಾರ್ಕ್ಸ್‌ವಾದಿ ವಿಮರ್ಶೆಯು ಮತ್ತೆ ಮತ್ತೆ ಬಳಸುವ ಪದವೆಂದರೆ ಐಡಿಯಾಲಜಿ. ಹೀಗೆಂದರೆ ವಾಸ್ತವಿಕಸತ್ಯದ ತಲೆಕೆಳಗಾದ ರೂಪ. ತನ್ನ ಸಮಕಾಲೀನ ಐಡಿಯಾಲಜಿಯ ಪರಿಮಿತಿಯನ್ನು ಮೀರಲು ಯಾವ ಲೇಖಕನಿಗೂ ಸಾಧ್ಯವಿಲ್ಲ. ಒಂದು ಶ್ರೇಷ್ಠ ಸಾಹಿತ್ಯಕೃತಿಯ ಐಡಿಯಾಲಜಿಯಿಂದ ರೂಪಿಸಲ್ಪಟ್ಟರೂ ಅದರಿಂದ ದೂರವನ್ನು ಸಾಧಿಸುವಲ್ಲಿ ಸಫಲವಾಗುವುದು.

**ಸಾಂಸ್ಕೃತಿಕ ಯಾಜಮಾನ್ಯ:** ಇಟಾಲಿಯನ್ ಮಾರ್ಕ್ಸ್‌ವಾದಿ ಚಿಂತಕ ಆಂಟೋನಿಯೊ ಗ್ರಾಮ್‌ಶಿ. ಶ್ರಮಿಕವರ್ಗಗಳು ನಡೆಸಿದ ಚಳವಳಿಗಳ ಸೋಲಿಗೆ ಕಾರಣ ಹುಡುಕುತ್ತಿದ್ದಾಗ ಈ ಪರಿಕಲ್ಪನೆಯನ್ನು ಹುಟ್ಟು ಹಾಕಿದನು. ಅಧಿಕಾರದಲ್ಲಿರುವ ವರ್ಗವು ತಮಗೆ ಅಧೀನವಾಗಿರುವ ಸಮುದಾಯಗಳ ಮೇಲೆ ಸ್ವಪ್ರೇರಣೆಯ ಸಮ್ಮತಿ ಗಳಿಸಿ, ತಮ್ಮ ನಿಯಂತ್ರಣವನ್ನು ಮುಂದುವರಿಸುತ್ತವೆ. ಇದಕ್ಕಾಗಿ ಎರಡು ಮಾರ್ಗಗಳನ್ನು ಅನುಸರಿಸುತ್ತವೆ: ಒಂದು, ನೇರ/ಪ್ರತ್ಯಕ್ಷ ಬಲ ಪ್ರಯೋಗದ ಮಾರ್ಗ (ಸೇನೆ, ಪೊಲೀಸ್ ಇತ್ಯಾದಿ) ಎರಡು, ಸರ್ವಸಮ್ಮತಿಮಾರ್ಗ (ಅಧೀನ ಸಮುದಾಯಗಳ ಸಾಹಿತ್ಯ–ಸಾಂಸ್ಕೃತಿಕ–ಆರ್ಥಿಕ ಸಾಧನೆಗಳನ್ನು ಕೀಳು ಎಂದು ಗ್ರಹಿಸಿ ಬಿಡುವುದು) ಇದೇ ಸಾಂಸ್ಕೃತಿಕ ಯಾಜಮಾನ್ಯ. ಇದೊಂದು ಸ್ಥಿರಸ್ಥಿತಿಯಲ್ಲ, ಒಂದು ಪ್ರಕ್ರಿಯೆ ಎಂದು ರೇಮಂಡ್ ವಿಲಿಯಮ್ಸ್ ಎಂಬ ವಿದ್ವಾಂಸನು ವ್ಯಾಖ್ಯಾನಿಸಿದನು.

**ಅನಾಥಪ್ರಜ್ಞೆ:** ಇದು ನವ್ಯ ಸಾಹಿತ್ಯದ ಮೂಲಕ ಕನ್ನಡವಾಚಕರಿಗೆ ಪರಿಚಿತವಾಗಿರುವುದೇ. ಆದರೆ ಮಾರ್ಕ್ಸ್‌ವಾದದಲ್ಲಿ ಇದಕ್ಕೆ ಎರಡು ಬೇರೆಯೇ ಅರ್ಥಗಳಿವೆ. ಕಾರ್ಖಾನೆಯ ಕಾರ್ಮಿಕನು ಯಂತ್ರದೊಂದಿಗೆ ದುಡಿಯುವಾಗ ತಾನು ನಿರ್ಮಿಸುವ ಬಿಡಿಭಾಗದ ಮೇಲೆ ಏನೂ ಅಧಿಕಾರವಿಲ್ಲದಂತಾಯಿತು. ಇಂಥ ಬದುಕಿನ ಅವಸ್ಥೆಯನ್ನು ಮಾರ್ಕ್ಸ್‌ವಾದಿಗಳು ಅನಾಥಪ್ರಜ್ಞೆ ಅಥವಾ ಪರಕೀಯತೆ ಎಂದು ಗುರುತಿಸಿದರು. ಇನ್ನೊಂದು ಅರ್ಥವೇನೆಂದರೆ ಜರ್ಮನ್ ನಾಟಕಕಾರ ಬರ್ಟೋಲ್ಟ್ ಬ್ರೆಕ್ಟ್‌ನ ಸಂಪೂರ್ಣ ರಂಗಭೂಮಿ (Epic/Total Theatre) ರಂಗಕ್ರಿಯೆಯಲ್ಲಿ ಸಭಿಕರು ಮಾನಸಿಕವಾಗಿ ತಾದಾತ್ಮ್ಯವನ್ನು ಹೊಂದಲು ಅಸಾಧ್ಯವಾದಾಗ ಮಾತ್ರ ನಾಟಕಗಳನ್ನು ಅವರು ವೈಚಾರಿಕ ನೆಲೆಯಲ್ಲಿ ವಿಮರ್ಶಿಸಲು ಸಾಧ್ಯ ಎಂಬುದು.

**ಕೃತಿ–ಸುಪ್ತಪ್ರಜ್ಞೆ ಮತ್ತು ರಾಜಕೀಯ ಸುಪ್ತಪ್ರಜ್ಞೆ:** ಮಾರ್ಕ್ಸ್‌ವಾದವು ಸಾಹಿತ್ಯಾದಿ ಲಲಿತಕಲೆಗಳನ್ನೂ 'ಉತ್ಪಾದನೆ'ಯ ಹಂತಕ್ಕೆ ಇಳಿಸುತ್ತದೆ ಅಥವಾ ಏರಿಸುತ್ತದೆ! ಪರಸ್ಪರ ಸಂಬಂಧವಿಲ್ಲದ ಭಿನ್ನ ಭಿನ್ನ ವಸ್ತುಗಳನ್ನು ಒಂದೆಡೆ ತರುವ ಮತ್ತು ಆ ಯತ್ನದಲ್ಲಿ ಅವನ್ನು ಬದಲಾಯಿಸುವ ತಯಾರಿಕೆ ಎಂದು ಮ್ಯಾಶೆರೆ ವ್ಯಾಖ್ಯಾನಿಸುತ್ತಾನೆ. ಆಳುವ ವರ್ಗದ ವರ್ಣಭೇದನೀತಿ, ವಸಾಹತೀಕರಣ ಮತ್ತು ಕ್ರೌರ್ಯ, ಸಾಮ್ರಾಜ್ಯವಾದೀ ಧೋರಣೆ ಇವೆಲ್ಲ ಇಲ್ಲಿ ಚರ್ಚಿಸಲ್ಪಡುತ್ತವೆ.

**ಮಾರ್ಕ್ಸ್‌ವಾದ ಮತ್ತು ಜನಪ್ರಿಯ ಕಲೆಗಳು:** ಜನಪ್ರಿಯ ಕಲೆಗಳಾದ ಮುದ್ರಣ, ಛಾಯಾಚಿತ್ರ, ಸಿನಿಮಾ, ಟೆಲಿವಿಷನ್, ಬಹುಮಾಧ್ಯಮ–ಇವು ನಮಗೆ ಆಧುನಿಕ ತಂತ್ರಜ್ಞಾನ ಕೊಟ್ಟಿರುವ ಕೊಡುಗೆಗಳು. ಇವನ್ನು ನಾವು ಕಲೆಯ ಅಂಗವೆಂದೇ ಪರಿಗಣಿಸಿದ್ದೇವೆ. ಜನಸಾಮಾನ್ಯರು ಇವನ್ನು ಅತಿಯಾಗಿ ಹಚ್ಚಿಕೊಂಡಿರುತ್ತಾರೆ. ಇದರ ಬಗ್ಗೆ ಮಾರ್ಕ್ಸ್‌ವಾದವು ಕಾಲಕಾಲಕ್ಕೆ ತನ್ನ ವಿಶ್ಲೇಷಣೆ ನಡೆಸಿದೆ.

ನವ್ಯವಿಮರ್ಶಕರು ಇವನ್ನು ಸಂಸ್ಕೃತಿಯ ನೇರ ಶತ್ರುಗಳೆಂದು ವಾದಿಸಿದರು. ಆದರೆ ಮುಂದೆ ಬಂದ ರಷ್ಯನ್ ಮಾರ್ಕ್ಸ್‌ವಾದೀ ಚಿಂತಕ ವಾಲ್ಟರ್ ಬೆಂಜಮಿನ್ ಎಂಬುವವನು ಜನಪ್ರಿಯ ಕಲೆಗಳನ್ನು ಬೇರೆಯೇ ಆದ ಚೌಕಟ್ಟಿನಲ್ಲಿಟ್ಟು ವಿವರಿಸಿದನು. ಶ್ರೀಮಂತರ ಸ್ವತ್ತಾಗಿದ್ದ ಲಲಿತಕಲೆಗಳನ್ನು ಜನಸಾಮಾನ್ಯರ ಬಳಿಗೆ ತಂದಿದ್ದೇ ಎಲೆಕ್ಟ್ರಾನಿಕ್ ಮಾಧ್ಯಮಗಳು ಎಂದನು. ಇಂಥ ತಾಂತ್ರಿಕ ಆವಿಷ್ಕಾರಗಳಿಂದ ಜನರ ಬಳಿಗೆ ಕಲೆಗಳು ಹೋಗಲು ಸಾಧ್ಯವಾಯಿತು. ಮೂರ್ಖರ ಪೆಟ್ಟಿಗೆಯು ತನ್ನ ನಿಜಾರ್ಥದಲ್ಲಿ ಜಾಣರ ಪೆಟ್ಟಿಗೆಯಾಗಿದೆ. ಆದರೆ ನವ್ಯವಿಮರ್ಶಕರು ಇದನ್ನು ಭ್ರಮೆ ಎಂದು ಜರಿಯುತ್ತಾರೆ. ಇಂದು ಯಾವುದೂ ಮಾಧ್ಯಮಗಳಾಗಿ ಉಳಿದಿಲ್ಲ, ಬದಲಾಗಿ ಉದ್ಯಮಗಳಾಗಿವೆ ಎಂಬುದನ್ನು ಗಮನಿಸಿದರೆ ಈ ವಿಚಾರಕ್ಕೆ ಹೆಚ್ಚು ಒತ್ತು ಬೀಳುತ್ತದೆ. ಮನೋರಂಜನೆಯ ಹೆಸರಿನಲ್ಲಿ ಅಸಹಾಯಕತೆ ಮತ್ತು ಮೃಗಳ್ಳತನಗಳನ್ನು ರೂಢಿಸಿಕೊಳ್ಳುವ ಸಾಧ್ಯತೆಯುಂಟು. ಒಟ್ಟಾರೆ ಮಾರ್ಕ್ಸ್‌ವಾದೀ ವಿಮರ್ಶೆಯು ಬಹುಮುಖ್ಯ ಮತ್ತು ಅರ್ಥಪೂರ್ಣ ವಾಗ್ವಾದಗಳನ್ನು ನಡೆಸಿದೆ. ಆದರೆ ಎಲ್ಲ ಸಂದರ್ಭದಲ್ಲೂ ಆರ್ಥಿಕ ಸಂಬಂಧವನ್ನೇ ಮುಂದು ಮಾಡಿಕೊಂಡು ಮಾತಾಡುವ ಈ ವಾದದ ಮೂಲಭೂತ ಪ್ರಣಾಲಿಯನ್ನು ಪ್ರಶ್ನಿಸಬಹುದು.

**3.2.3 ಸ್ತ್ರೀನಿಷ್ಠ ವಿಮರ್ಶೆ:** ಸ್ತ್ರೀ ಸ್ವಾತಂತ್ರ್ಯ ಚಳವಳಿಯ ಒಂದು ಮುಖ ಸ್ತ್ರೀವಾದಿ ವಿಮರ್ಶೆ (Feminist criticism) ಇದು ಸಮಾಜಕೇಂದ್ರಿತ ವಿಮರ್ಶೆಯ ಇನ್ನೊಂದು ಕವಲು. ಇದರ ಸೈದ್ಧಾಂತಿಕ ನೆಲೆಯನ್ನು ಗುರುತಿಸುವುದು ಪ್ರಥಮತಃ ಮಹಿಳಾ ಹೋರಾಟದ ಮುಖ್ಯ ವಕ್ತಾರರಾದ ಸಿಮೋನ್ ದ ಬುವಾ, ಜೂಲಿಯಾ ಕ್ರಿಸ್ಟೇವ ಮತ್ತು ಕೇಟ್ ಮಿಲೆಟ್ ಅವರು ರಚಿಸಿದ ಗ್ರಂಥಗಳಿಂದ. 1763 ರಲ್ಲಿ ಲೇಡಿ ಮೇರಿ ಬರೆದ ಪತ್ರಗಳು ಮತ್ತು 1792 ರಲ್ಲಿ ವುಲ್‌ಸ್ಟನ್‌ಕ್ರಾಫ್ಟ್ ಬರೆದ ಸ್ತ್ರೀಯರ ಹಕ್ಕುಗಳ ಸಮರ್ಥನೆ. ಇವನ್ನು ಇಂದಿಗೂ ಮಹಿಳಾನಿಷ್ಠ ಚಿಂತನೆಯ ಪ್ರಪ್ರಥಮ ಅಭಿವ್ಯಕ್ತಿಯೆಂದು ಇತಿಹಾಸಕಾರರು ಗುರುತಿಸುತ್ತಾರೆ. ವ್ಯಾಪಕವಾಗಿ, ಶಾಸ್ತ್ರೀಯವಾಗಿ ಮತ್ತು ಪ್ರಭಾವಯುತವಾಗಿ ಮಹಿಳಾಕೇಂದ್ರಿತ ಚಿಂತನೆಗೆ ಅಭಿವ್ಯಕ್ತಿ ಕೊಟ್ಟ ಲೇಖಕಿ ಸಿಮೋನ್ ದ ಬುವಾ. ಈಕೆಯ ಪ್ರಸಿದ್ಧ ಸ್ತ್ರೀವಾದಿ ಕೃತಿ ದ್ವಿತೀಯ ಲಿಂಗ (Second Sex) ಫ್ರೆಂಚ್ ಭಾಷೆಯಲ್ಲಿ 1949 ರಲ್ಲಿ ಪ್ರಕಟವಾಯಿತು. ಪ್ರಾಚೀನಕಾಲದಿಂದಲೂ ಸ್ತ್ರೀ ಎಲ್ಲ ಸಮಾಜಗಳಲ್ಲೂ ಎರಡನೆಯ ದರ್ಜೆಯ ಪ್ರಜೆಯಾಗಿಯೇ ಉಳಿದಿದ್ದಾಳೆಂದು ಮನವರಿಕೆ ಮಾಡುತ್ತಾಳೆ.

ದ್ವಿತೀಯ ಲಿಂಗ ಕೃತಿಯಲ್ಲಿ ಎರಡು ಭಾಗಗಳಿವೆ. ಸತ್ಯ ಮತ್ತು ಕಟ್ಟುಕತೆಗಳು (Facts & Myths) ಎಂಬ ಮೊದಲಭಾಗದಲ್ಲಿ ಹೇಗೆ ಪ್ರಾಚೀನ ಕಾಲದಿಂದಲೂ ಪುರುಷರು ಸ್ತ್ರೀಯನ್ನು ಸ್ವತಂತ್ರ ವ್ಯಕ್ತಿಯಾಗಿ ನೋಡದೆ, ತಾಯಿ, ಪತ್ನೀ, ವೇಶ್ಯೆ ಇತ್ಯಾದಿ ಸಿದ್ಧ ಪರಿಯಚ್ಚುಗಳಲ್ಲಿ ಕಂಡಿದ್ದಾರೆಂಬುದನ್ನು ದಾಖಲಿಸುತ್ತಾಳೆ. ಇಂದಿನ ಸ್ತ್ರೀಯ ಬದುಕು ಎಂಬ ಎರಡನೆಯ ಭಾಗದಲ್ಲಿ ಮಹಿಳೆಯ ಶಿಕ್ಷಣ ಹಾಗೂ ವಿಮುಕ್ತಿಯ ಕಡೆಗೆ ಹೇಗೆ ಚಲಿಸಬಹುದೆಂಬುದನ್ನು ಪ್ರತಿಪಾದಿಸುತ್ತಾಳೆ. **ಅನ್ಯವಾಗಿಸುವಿಕೆ** (Othering): ಹೆಣ್ಣು ತನ್ನಲ್ಲಿರುವ ಕೊರತೆಗಳಿಂದ ಹೆಣ್ಣಾಗಿದ್ದಾಳೆ ಮತ್ತು ಹೆಣ್ಣಿನ ಸ್ವಭಾವವು ಕೆಲವು ನಿಸರ್ಗದತ್ತ ಮಿತಿಗಳಿಂದ ರೂಪಿಸಲ್ಪಟ್ಟಿದೆ ಎಂದು ಅರಿಸ್ಟಾಟಲ್ ಹೇಳುವುದನ್ನು ಸಿಮೋನ್ ದ ಬುವಾ ಒಪ್ಪುವುದಿಲ್ಲ. ಇಂಥ ದೃಷ್ಟಿಕೋನದಿಂದಲೇ ಮಹಿಳೆ ಪರಕೀಯಳಾದಳು. ಇದೇ ಅನ್ಯವಾಗಿಸುವಿಕೆ.

**ಲಿಂಗಭೇದ ಮತ್ತು ಲಿಂಗಾಧಾರಿತ ಸಮಾನತೆ** (Gender Bios) ಮಹಿಳೆಗೆ ಧಾರ್ಮಿಕ ಮೊದಲಾದ ಸ್ವಾತಂತ್ರ್ಯಗಳನ್ನು ನಿರಾಕರಿಸಿದ್ದು. ಅವಳಿಗೆ ಗರ್ಭಕೋಶವಿರುವುದರ ಅರ್ಥ ಅವಳ ಬದುಕಿನ ಮುಖ್ಯ ಉದ್ದೇಶವೇ ಸಂತಾನವೃದ್ಧಿ ಎಂದು ಪುರುಷ ಸಮಾಜ ತೀರ್ಮಾನಿಸಿದ್ದೇ ಲಿಂಗಭೇದಕ್ಕೆ ಕಾರಣವಾಯಿತು. ಇಂತಹ ಜೈವಿಕ ಸಾಕ್ಷ್ಯವು ಸ್ತ್ರೀಯನ್ನು ಪುರುಷನಿಗಿಂತ ಭಿನ್ನಳೆಂದು ಸ್ಥಾಪಿಸುತ್ತದೆಯೇ ವಿನಾ ಅವನಿಗಿಂತ ಕೀಳು ಎಂದಲ್ಲ ಎಂದು ಬುವಾ ಪ್ರತಿಪಾದಿಸಿದಳು. ಮುಂದುವರೆದು, ಎಂದಿನವರೆಗೆ ಪುರುಷನಿರ್ಮಿತ ಮಾನಸಿಕ, ವೈಚಾರಿಕ ಚೌಕಟ್ಟುಗಳಲ್ಲಿಯೇ ಮಹಿಳೆ ಬದುಕಬೇಕಾಗುತ್ತದೋ ಅಲ್ಲಿಯವರೆಗೆ ನಿಜವಾದ ಅರ್ಥದಲ್ಲಿ ಮಹಿಳೆ ಸ್ವತಂತ್ರಳಲ್ಲ ಎನ್ನುತ್ತಾಳೆ.

ಬುವಾ ಪುಸ್ತಕದಿಂದ ಸ್ತ್ರೀವಾದಕ್ಕೆ ವ್ಯಾಪಕ ಮಹತ್ವ ದೊರೆಯಿತು. ಕೇಟ್ ಮಿಲೆಟ್ ಲೈಂಗಿಕ ರಾಜಕೀಯ (Sexual Politics) ಕೃತಿಯನ್ನು ಬರೆದ ಮೇಲಂತೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೊಸ ಸಂಚಲನವಾಯಿತು.

ಸ್ತ್ರೀಯರು ಪುರುಷರ ಲೈಂಗಿಕ ರಾಜಕೀಯದ ಬಲಿಪಶುಗಳಾಗಿ ಅನಾದಿಕಾಲದಿಂದಲೂ ತಮ್ಮದೆಂದು ಪುರುಷರಿಂದ ನಿರ್ಧರಿಸಲ್ಪಟ್ಟ ಸಿದ್ಧ ಪಡಿಯಚ್ಚುಗಳ ಒಳಗೇ ಬದುಕುತ್ತಿದ್ದಾರೆ ಎಂದು ಮಿಲೆಟ್ ತೀರ್ಮಾನಿಸಿದಳು. ಬುವಾ ವಾದವನ್ನು ಮುಂದುವರೆಸಿದ ಮಿಲೆಟ್ **ಲಿಂಗಭೇದಕ್ಕೂ ಲಿಂಗಪ್ರಜ್ಞೆಗೂ** (Sex & Gender) ಇರುವ ವ್ಯತ್ಯಾಸವನ್ನು ಪ್ರಬಲವಾಗಿ ಮಂಡಿಸಿದಳು. ಲಿಂಗಭೇದವು ಜೈವಿಕವಾಗಿ ನಿರ್ಧರಿಸಲ್ಪಟ್ಟಿದ್ದು, ಲಿಂಗಪ್ರಜ್ಞೆಯು ನಮ್ಮ ಶಿಕ್ಷಣ, ನಂಬಿಕೆ ಮತ್ತು ಸಂಸ್ಕೃತಿಗಳು ರೂಪಿಸಿದ್ದು. ಮಹಿಳಾವಾದದ ಚಿಂತನೆಯ ದಿಕ್ಕನ್ನು ಶಾರನ್ ಸ್ಪೆನ್ಸರ್ ಎಂಬಾಕೆ ಹೀಗೆ ಗುರುತಿಸುತ್ತಾಳೆ:

ಇಂದು ಲಭ್ಯವಿರದ ಅಥವಾ ವಿನಾಕಾರಣ ನಿರ್ಲಕ್ಷಿಸಲ್ಪಟ್ಟಿರುವ ಮಹಿಳಾಸಾಹಿತ್ಯವನ್ನು ಶೋಧಿಸಿ ಬೆಳಕಿಗೆ ತರುವುದು. ಪ್ರಾಚೀನ ಮತ್ತು ಆಧುನಿಕ ಸಾಹಿತ್ಯದಲ್ಲಿ ಮೂಡಿ ಬಂದಿರುವ ಮಹಿಳೆ ಮತ್ತು ಮಹಿಳೆ–ಪುರುಷ ಸಂಬಂಧಗಳನ್ನು ವಿಶ್ಲೇಷಿಸಿ, ವ್ಯಾಖ್ಯಾನಿಸುವುದು. ಸ್ತ್ರೀಕೇಂದ್ರಿತ ವೈಚಾರಿಕ ನೆಲೆಯಲ್ಲಿ ಕೃತಿಗಳನ್ನು ರಚಿಸುವಂಥ ವಾತಾವರಣವನ್ನು ನಿರ್ಮಿಸುವುದು ಇತ್ಯಾದಿ.

ಪಾಶ್ಚಿಮಾತ್ಯ ಸ್ತ್ರೀವಾದವನ್ನು ಯಥಾವತ್ತಾಗಿ ಭಾರತದಲ್ಲಿ ಅನುಕರಿಸುವುದನ್ನು ಕೆಲವರು ಒಪ್ಪುವುದಿಲ್ಲ. ಸಂಸ್ಕೃತಿವಿಭಿನ್ನತೆಯೇ ಇದಕ್ಕೆ ಪ್ರಮುಖ ಕಾರಣ. ಆದರೆ ಸ್ತ್ರೀವಾದಿಗಳು ಇದನ್ನು ಖಂಡಿಸುತ್ತಾ, ಇಂಥ ಸಂಸ್ಕೃತಿಯೆಂಬುದೇ ಪುರುಷನಿರ್ಮಿತವಾದುದು ಮಾತ್ರವಲ್ಲ, ಆಡುವ ಭಾಷೆಯು ಸಹ ಪುರುಷಪ್ರಧಾನವಾದುದು ಎಂದು ಪ್ರತಿಪಾದಿಸುತ್ತಾರೆ. ಹಾಗಾಗಿ, ಭಾರತೀಯ ಸ್ತ್ರೀವಾದ ಪ್ರತ್ಯೇಕವಾಗಿ ರೂಪುಗೊಂಡು ಬೆಳೆಯಹತ್ತಿದೆ. ಭಾರತದಲ್ಲಿ ಸ್ತ್ರೀವಾದವನ್ನು ಮತ್ತಷ್ಟು ಗೊಂದಲಗೊಳಿಸುವ ಇನ್ನೊಂದು ಸಂಗತಿಯೆಂದರೆ ಇಲ್ಲಿಯ ಜಾತಿಪದ್ಧತಿ. ಹೀಗೆ ಕಳೆದ ಐದು ದಶಕಗಳ ಇತಿಹಾಸವಿರುವ ಸ್ತ್ರೀವಾದದ ಆಶಯ ಮತ್ತು ತತ್ತ್ವಗಳನ್ನು ಅನ್ವಯಿಸಿ ಮಾಡಲಾಗುವ ವಿಮರ್ಶೆಯೇ ಸ್ತ್ರೀನಿಷ್ಠ ವಿಮರ್ಶೆ. ಕನ್ನಡದಲ್ಲಿ ವಿಜಯಾದಬ್ಬೆ, ಬಿ ಎನ್ ಸುಮಿತ್ರಾಬಾಯಿ, ಎನ್ ಗಾಯಿತ್ರಿ, ನೇಮಿಚಂದ್ರ, ಎಂ ಎಸ್ ಆಶಾದೇವಿ ಮೊದಲಾದವರು ಇಂಥ ವಿಮರ್ಶೆಯನ್ನು ಬೆಳೆಸಿದವರಲ್ಲಿ ಪ್ರಮುಖರು.

**4. ಪ್ರಾಯೋಗಿಕ ವಿಮರ್ಶೆ:** ನವ್ಯ ವಿಮರ್ಶೆಯ ಪ್ರಧಾನ ಸೃಷ್ಟಿಯಿದು. ಒಂದು ರೀತಿಯಲ್ಲಿ ಕೃತಿಕೇಂದ್ರಿತ ವಿಮರ್ಶೆಯ ಹತಾರ ಎಂದರೂ ತಪ್ಪಾಗಲಾರದು. ಗದ್ಯ ಅಥವಾ ಪದ್ಯದ ಭಾಗವೊಂದನ್ನು ತೀಕ್ಷ್ಣ ವಿಮರ್ಶೆಯ ನಿಕಷಕ್ಕೊಡ್ಡುವುದು. ಇದರಿಂದ ಅರ್ಥದ ಅನಂತ ಸಾಧ್ಯತೆಗಳು ಲಭ್ಯವಾಗುತ್ತವೆ. ಕನ್ನಡದಲ್ಲಂತೂ ನವ್ಯರು ಇಂಥ ಸಾಕಷ್ಟು ಪ್ರಯೋಗಗಳನ್ನು ಮಾಡಿದರು. ಆದರೆ ಇದರಿಂದ ಕೃತಿಯ ಒಟ್ಟಾರೆ ಪ್ರಬಂಧ ಧ್ವನಿಗೆ ಧಕ್ಕೆ ಬರುತ್ತದೆಂದು ಬಹಳ ಮಂದಿ ವಿದ್ವಾಂಸರೇ ಆ ತರುವಾಯ ಅಭಿಪ್ರಾಯಪಟ್ಟರು. ಯಾವುದೇ ಕೃತಿಯಲ್ಲಿ ವಸ್ತು ಮತ್ತು ರೂಪ (Content & Form) ಇರುತ್ತದೆ. ಇದನ್ನೇ ಕೆಲವರು ಅನುಭವ ಮತ್ತು ಅಭಿವ್ಯಕ್ತಿ ಎಂದೂ ಕರೆಯುತ್ತಾರೆ. ವಿಮರ್ಶಕನು ಇದರ ಆತ್ಯಂತಿಕ ನೆಲೆಯಲ್ಲಿ ವ್ಯಾಖ್ಯಾನಿಸಿದಾಗ ರಚನಾಕಾರನೇ/ಳೇ ದಂಗು ಬಡಿದು ಹೋಗುತ್ತಾರೆ. ಅಂದರೆ ಪ್ರಾಯೋಗಿಕ ವಿಮರ್ಶೆಯಲ್ಲಿ ಇಂಥ ಅಪಾರ ಅರ್ಥವೈವಿಧ್ಯಗಳು ದೊರಕುತ್ತವೆ. ಸಾಹಿತ್ಯದ ವಿದ್ಯಾರ್ಥಿಗಳು ಈ ರೀತಿಯ ವಿಮರ್ಶೆಯಿಂದಲೇ ಕೃತಿಯನ್ನು ಪ್ರವೇಶಿಸುವುದು ಹೇಗೆ? ಮತ್ತು ವಿಮರ್ಶೆಯ ಮಾನದಂಡ ಮತ್ತು ಪರಿಭಾಷೆಗಳನ್ನು ಬಳಸುವುದು ಹೇಗೆ? ಎಂಬುದನ್ನು ಅಭ್ಯಾಸದಿಂದ ತಿಳಿಯುವರು.

+----------ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ 18-03-2013 ರಂದು ಉಚಿತವಾಗಿ ಹಂಚಲಾಗಿದೆ-----------+

ಡಾ. ಎಚ್ ಎನ್ ಮಂಜುರಾಜ್, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಪದವಿ ಕಾಲೇಜು, ಕೃಷ್ಣರಾಜನಗರ, ಮೈಸೂರು ಜಿಲ್ಲೆ

ಮಾತಾಡಲು: 9900119518, ಮಿಂಚಂಚಿಸಲು:1) manjupage@gmail.com 2) manjuraj1969@gmail.com ಮಿಂಬ್ಲಾಗು: www.manjupage.blogspot.com